# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:01 • ಸಂಚಿಕೆ:301 • ನೋಂದಣಿ ನಂ.:KARKAN27911 • ವಿಜಯನಗರ • 30.04.2024 • ಮಂಗಳವಾರ • ಪುಟ:04 • ಬೆಲೆ:2

Volume:01 • Issue:301 • Reg.No:KARKAN27911 • VIJAYANAGARA • 30.04.2024 • Tuesday • Page:04 • Rs:2


# ಬಿಜೆಪಿಗೆ ಸೋಲಿನ ಭೀತಿ ಎದುರಾಗಿದೆ 200 ಸ್ಥಾನ ಗೆದ್ದರೆ ಹೆಚ್ಚು : ಸಿಎಂ



**ಹಂಪಿ ಟೈಮ್ಸ್ ಕೂಡ್ಲಿಗಿ**

ಪ್ರಧಾನಿ ಮೋದಿ ಅಭಿವೃದ್ಧಿ ವಿಷಯಗಳನ್ನು ಚರ್ಚಿಸದೇ ಬರೀ ಜನರೊಂದಿಗೆ ಭಾವನೆಗಳ ಮೂಲಕ ಚೆಲ್ಲಾಟವಾಡುತ್ತ, ಸುಳ್ಳುಗಳನ್ನೆ ಚುನಾವಣಾ ಅಸ್ತ್ರಗಳನ್ನಾಗಿ ಮಾಡಿ ಕೊಂಡಿದ್ದಾರೆ. ಮೋದಿ ಮತ್ತು ಶ್ರೀರಾಮುಲು ಬಳ್ಳಾರಿ ಜನಕ್ಕೆ ಕೊಟ್ಟ ಚೊಂಬನ್ನು ಶ್ರೀರಾಮುಲು ಕೈಗೆ ವಾಪಾಸ್ ಕೊಡಿ ಎಂದು ಸಿ.ಎಂ.ಸಿದ್ದರಾಮಯ್ಯ ಕರೆ ನೀಡಿ, ವಾಗ್ದಾಳಿ ನಡೆಸಿದರು.

ಪಟ್ಟಣದ ಮಹಾದೇವ ಮೈಲಾರ ಕ್ರೀಡಾಂಗಣದಲ್ಲಿ ಸೋಮವಾರ ಪ್ರಜಾಧ್ವನಿ-2 ಚುನಾವಣಾ ಬಹಿರಂಗ ಸಮಾವೇಶ ಉದ್ಘಾಟಿಸಿ ಮಾತನಾಡಿ, ಕಳೆದ ಹತ್ತು ವರ್ಷಗಳ ಮೋದಿ ಆಡಳಿತದಲ್ಲಿ ಯಾವುದೇ ಅಭಿವೃದ್ಧಿ ಪರವಾದ ಕೆಲಸಗಳಾಗಿಲ್ಲ, 15 ಲಕ್ಷ ರೂಪಾಯಿ ಬಡವರ ಖಾತೆಗೆ ಬಂದಿಲ್ಲ, ಉದ್ಯೋಗ ಸೃಷ್ಟಿಯಾಗಲಿಲ್ಲ, ದಿನ ನಿತ್ಯ ಅಗತ್ಯ ವಸ್ತುಗಳ ಬೆಲೆ ಇಳಿಸ್ತಿವಿ ಎಂದರು ಇಳಿಸಲಿಲ್ಲ, ರಸ ಗೊಬ್ಬರ ಇಳಿಸ್ತಿವಿ ಎಂದು ಅಧಿಕಾರಕ್ಕೆ ಬಂದು ರಾಜ್ಯಕ್ಕೆ ಕೊಟ್ಟಿದ್ದು ಚೊಂಬು. ರಾಜ್ಯದಲ್ಲಿ ತೀವ್ರ ಬರಗಾಲ ಇದ್ದರು, ಪರಿಹಾರ ಕೊಡಲು ಹಿಂದೇಟು ಹಾಕಿದರು. ನಾವು ಬರ ಪರಿಹಾರ ಕೇಳಿದ್ದು 18,172 ಕೋಟಿ ಆದರೆ ಕೋರ್ಟ್ ಛಿಮಾರಿ ಹಾಕಿದ ನಂತರ ಈಗ ಕೇವಲ 3454 ಕೋಟಿ ನೀಡಿ ಕೈತೊಳೆದು ಕೊಂಡಿದ್ದಾರೆ. ಆದರೆ ಕಾಂಗ್ರೆಸ್ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಬಡವರಿಗೆ ಸೂರು ನೀಡಿದ್ದು, ಜನ, ಜಾನುವಾರುಗಳಿಗೆ ಮೇವಿನ ತೊಂದರೆ ಆಗಬಾರದು ಎಂದು ಮೇವು ನೀಡಿ, ಜನರಿಗೆ ಉದ್ಯೋಗ ನೀಡಿದ್ದೇವೆ ಎಂದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನುಡಿದಂತೆ 5 ಗ್ಯಾರಂಟಿಗಳನ್ನು ನೀಡಿ ರಾಜ್ಯದ ಜನತೆಯ ವಿಶ್ವಾಸ ಉಳಿಸಿಕೊಂಡಿದ್ದೇವೆ ಎಂದರು. ಬಿಜೆಪಿ ಲೋಕಸಭಾ ಅಭ್ಯರ್ಥಿ ಬಿ.ಶ್ರೀರಾಮುಲು ಮಂತ್ರಿಯಾಗಿ ಸಂಪೂರ್ಣವಾಗಿ ವಿಫಲರಾಗಿದ್ದರು, ಭ್ರಷ್ಟಾಚಾರದಲ್ಲಿ ಮುಳುಗಿದವರು, ಬಳ್ಳಾರಿ ಸಂಸದರಾಗಿದ್ದಾಗ ಅವರ ಕೊಡುಗೆ ಶೂನ್ಯ, ಶಾಸಕರಾಗಲು ಅಸಮರ್ಥರು ಅಂಥವರನ್ನು ಗೆಲ್ಲಿಸಬೇಕಾ ಎಂದು ಕಿಡಿಕಾರಿದರು. ಅದರಂತೆ ರಾಜ್ಯಕ್ಕೆ ಪ್ರಧಾನಿ ಮೋದಿ ಕೊಡುಗೆ ಕೂಡ ಶೂನ್ಯ, ತೆರಿಗೆ ಹಂಚಿಕೆಯಲ್ಲಿ ಅನ್ಯಾಯ, 15 ನೇ ಹಣಕಾಸು ಆಯೋಗದಲ್ಲಿ ಹಣ ನೀಡದೇ ಅನ್ಯಾಯ, ಭದ್ರ ಮೇಲ್ದಂಡೆ ಯೋಜನೆಗೆ 5300 ಕೋಟಿ ಹಣ ನೀಡುವೆ ಎಂದು ಬಜೆಟ್ ನಲ್ಲಿ ಹೇಳಿ ನೀಡದೇ ಅನ್ಯಾಯ ಮಾಡಿದ್ದಾರೆ. ಹತ್ತು ವರ್ಷಗಳ ಕಾಲ ಸಾಮಾಜಿಕವಾಗಿ, ಆರ್ಥಿಕವಾಗಿ ದಿವಾಳಿ ಮಾಡಿ, ಸುಳ್ಳುಗಳೊಂದಿಗೆ ಆಡಳಿತ ನಡೆಸಿದ್ದಾರೆ. ಈಗ ಸೋಲಿನ ಭೀತಿ ಎದುರಾಗಿದೆ. ಈ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸವಿಲ್ಲ, ಅವರ ಸರ್ವೆ ಪ್ರಕಾರ ಕೇವಲ 200 ಕ್ಷೇತ್ರಗಳಲ್ಲಿ ಗೆಲ್ಲುವ ವರದಿ ಬಂದಿದೆ. ಕರ್ನಾಟಕದಲ್ಲಿ ಕಳೆದ ಲೋಕಸಭಾ ಚುನಾವಣೆಯಲ್ಲಿ 28 ಕ್ಕೆ 25 ಸ್ಥಾನ ಬಿಜೆಪಿ ಗೆದ್ದಿದ್ದರು. ಆವಾಗ ಜನರಿಗೆ ಭಾವನಾತ್ಮಕ ಮಾತನಾಡಿ, ಸುಳ್ಳುಗಳು ಹೇಳಿ ಗೆದ್ದರು. ಪುಲ್ವಾಮಾ ದಾಳಿಯ ವಿಷಯದಿಂದ ಗೆದ್ದರು. ಆದರೆ ಈ ಬಾರಿ ಆ ಸುಳ್ಳುಗಳ ಆಟ ನಡೆಯೋಲ್ಲ ಎಂದು ತೀವ್ರ ವಾಗ್ದಾಳಿ ನಡೆಸಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ಕಳೆದ ಲೋಕಸಭಾ ಚುನಾವಣೆ ಯಲ್ಲಿ ಬಿಜೆಪಿ ಪಕ್ಷದಿಂದ ಆಯ್ಕೆಯಾದ ಯಾರೂ ಬಳ್ಳಾರಿ ಕ್ಷೇತ್ರದ ಬಗ್ಗೆ ದೆಹಲಿಯಲ್ಲಿ ಚಕಾರ ಎತ್ತಲಿಲ್ಲ, ಬಿಜೆಪಿ ಪಕ್ಷದ ಕೊಡುಗೆ ಬಿಜೆಪಿ ಸಂಸದರ ಕೊಡುಗೆ ಏನು ಇಲ್ಲ. ಶ್ರೀರಾಮುಲು ಮಂತ್ರಿಯಾದಗಲೂ ಬಳ್ಳಾರಿಗೆ, ರಾಜ್ಯಕ್ಕೆ ಏನು ಇಲ್ಲ, ಇಂಥಹ ಅಭ್ಯರ್ಥಿಯನ್ನ ಗೆಲ್ಲಿಸಬೇಕಾ ಎಂದು ನೆರೆದಿದ್ದ ಜನರನ್ನು ಕೇಳಿದರು. ಕೋವಿಡ್ ಸಂಧರ್ಭದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವನ್ನು ಪರಿಹಾರ ನೀಡಿ ಎಂದು ನಾವು ಕೇಳಿದರೆ ನೀಡಲಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ತನ್ನದೇ ಇತಿಹಾಸ ಇದೆ. ಬಡ ಜನರ ಕಷ್ಟ ಅರಿತು ಕೆಲಸ ಮಾಡಿದ್ದೇವೆ. 371 ಜೆ ನೀಡಿದ್ದು ಕಾಂಗ್ರೆಸ್ ಸರ್ಕಾರ, ಸೋನಿಯಾ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಈ ಭಾಗದ ಜನರ ಹಿತಾಸಕ್ತಿ ಅರಿತು ಮೀಸಲಾತಿ ನೀಡಿದ್ದು ಇತಿಹಾಸ, ಶಿಕ್ಷಣ, ಉದ್ಯೋಗ ಸೇರಿದಂತೆ ಅಭಿವೃದ್ಧಿ ಕಾರ್ಯಕ್ರಮದಲ್ಲೂ ವಿಶೇಷ ಅನುದಾನ ನೀಡಿದ್ದೇವೆ. ಈ ಭಾಗದ ಜನರ ನೀರಾವರಿ ಯೋಜನೆಯಾದ 74 ಕೆರೆಗಳಿಗೆ ನೀರು ತುಂಬಿಸಲು ಈಗಾಗಲೇ ಕಾಮಗಾರಿ ಮುಗಿಯುವ ಹಂತದಲ್ಲಿ ಇದ್ದು, ಅದನ್ನು ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಸಚಿವರಾದ ರಾಮಲಿಂಗ ರೆಡ್ಡಿ, ಜಮೀರ್ ಅಹಮ್ಮದ್, ಅಭ್ಯರ್ಥಿ ಈ.ತುಕಾರಾಂ, ಶಾಸಕರಾದ ಎನ್.ವೈ.ಗೋಪಾಲ ಕೃಷ್ಣ, ಡಾ.ಎನ್.ಟಿ.ಶ್ರೀನಿವಾಸ್, ಎಂ.ಪಿ. ಲತಾ ಮಲ್ಲಿಕಾರ್ಜುನ, ಭೀಮಾನಾಯ್ಕ್, ಪರಮೇಶ್ವರ ನಾಯ್ಕ್, ಗಣೇಶ್, ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಬಿ.ವಿ.ಶಿವಯೋಗಿ, ಸಿರಾಜ್ ಶೇಖ್, ಮಾಜಿ ಸಚಿವರಾದ ಅಲ್ಲಂ ವೀರಭದ್ರಪ್ಪ, ಎನ್.ಎಂ.ನಬಿ, ಎನ್.ಟಿ.ತಮ್ಮಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಮಾರಗೌಡ, ನಾಗಮಣಿ ಜಿಂಕಾಲ್, ಕಾವಲಿ ಶಿವಪ್ಪನಾಯಕ, ಉದಯ ಜನ್ನು, ಟಿ.ಜಿ.ಮಲ್ಲಿಕಾರ್ಜುನ ಗೌಡ, ಡಿ.ಎಚ್. ದುರುಗೇಶ್ ಇತರರು ಇದ್ದರು.

# ಮೇ 12ರಂದು ಉಜ್ಜಿನಿ ಶ್ರೀ ಮರುಳಸಿದ್ದೇಶ್ವರ ರಥೋತ್ಸವ

**ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ಉಜ್ಜಿನಿ ಗ್ರಾಮದ ಆರಾಧ್ಯ ದೇವ ಪಂಚ ಪೀಠಗಳಲ್ಲಿ ಒಂದಾದ ಜಗದ್ಗುರು ಶ್ರೀ ಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವ ಮೇ.12ರಂದು ನಡೆಯಲಿದ್ದು, ಅದರ ನಿಮಿತ್ತ ಭಾನುವಾರ ನೂರಾರು ಭಕ್ತರು ತೇರುಗಾಲಿ ಹೊರ ಹಾಕುವ ಕಾರ್ಯಕ್ರಮದಲ್ಲಿ ಸಂಭ್ರಮದಿಂದ ಪಾಲ್ಗೊಂಡು ನೆರವೇರಿಸಿದರು.

ಮೇ 12 ರಂದು ರಥೋತ್ಸವ, 13 ಕ್ಕೆ ಶ್ರೀ ಸ್ವಾಮಿಯ ಶಿಖರ ತೈಲಾಭಿಷೇಕ ವಿಜೃಂಭಣೆಯಿಂದ ನೆರವೇರಲಿದೆ. 17 ಕ್ಕೆ ಶ್ರೀಪೀಠದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಲಿದ್ದು, ಸಕಲ ಭಕ್ತಾದಿಗಳು ರಥೋತ್ಸವಕ್ಕೆ ಮತ್ತು ತೈಲಾಭಿಷೇಕಕ್ಕೆ ಪಾಲ್ಗೊಂಡು ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕು ಎಂದು ಶ್ರೀ ಪೀಠ ತಿಳಿಸಿದೆ.

ಶ್ರೀಸ್ವಾಮಿಯ ಧಾರ್ಮಿಕ ಪರಂಪರೆಯಂತೆ ಜಗದ್ಗುರು ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ತೇರುಗಾಲಿಯನ್ನು ಭಾನುವಾರ ಸಕಲ ವಾದ್ಯ ಮೇಳಗಳೊಂದಿಗೆ ಭಕ್ತರ ಜಯ ಘೋಷದೊಂದಿಗೆ ರಥವನ್ನು ತೇರು ಬಯಲುವರಿಗೆ ಎಳೆಯಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಸಮಸ್ತ ಭಕ್ತರು ಹಾಗೂ 9 ಪಾದಗಟ್ಟೆಗಳ ಭಕ್ತಾದಿಗಳು ಸುತ್ತಮುತ್ತಲಿನ ಹಳ್ಳಿಯ ಭಕ್ತಾಧಿಗಳು ಇದ್ದರು.



# ಚುನಾವಣಾ ಜಾಹೀರಾತುಗಳಿಗೆ ಪೂರ್ವಾನುಮತಿ ಕಡ್ಡಾಯ


**ಹಂಪಿ ಟೈಮ್ಸ್ ಕೊಪ್ಪಳ**

ಲೋಕಸಭಾ ಚುನಾವಣೆಯಲ್ಲಿ ವಿವಿಧ ಮಾಧ್ಯಮಗಳಾದ ದಿನಪತ್ರಿಕೆಗಳು,ಟಿ.ವಿ,ಕೇಬಲ್ ನೆಟ್ವರ್ಕ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳ ಮೇಲೆ ಎಂ.ಸಿ.ಎಂ.ಸಿ ಸಮಿತಿ ವತಿಯಿಂದ ನಿಗಾವಹಿಸಲಾಗುತ್ತಿದ್ದು ಚುನಾವಣಾ ಜಾಹೀರಾತುಗಳಿಗೆ ಪೂರ್ವಾನುಮತಿ ಕಡ್ಡಾಯವಾಗಿರುತ್ತದೆ.

ಜಿಲ್ಲಾಧಿಕಾರಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಧ್ಯಮ ಪ್ರಮಾಣೀಕರಣ ಹಾಗೂ ಮೇಲುಸ್ತುವಾರಿ ಸಮಿತಿ (ಎಂ.ಸಿ.ಎಂ.ಸಿ) ವಿವಿಧ ಮಾಧ್ಯಮಗಳಲ್ಲಿ ದಿನನಿತ್ಯ ಪ್ರಸಾರವಾಗುವ ಸುದ್ದಿ, ಜಾಹೀರಾತುಗಳ ಕುರಿತು 24/7 ನಿಗಾವಹಿಸುತ್ತಿರುತ್ತದೆ. ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಣೆಗೆ ಮತದಾನದ ಮುನ್ನಾ ದಿನ ಹಾಗೂ ಮತದಾನ ದಿನದಂದು ಅಂದರೆ ಮೇ 06 ಹಾಗೂ 07 ರಂದು ಜಾಹೀರಾತು ಪ್ರಕಟಣೆಗೆ ಪೂರ್ವಾನುಮತಿ ಕಡ್ಡಾಯವಾಗಿದ್ದು, ಪೂರ್ವಾನುಮತಿ ಪಡೆದ ಜಾಹೀರಾತುಗಳನ್ನು ಮಾತ್ರ ಪ್ರಕಟಿಸಬಹುದು. ಅಭ್ಯರ್ಥಿಗಳು ಅಥವಾ ರಾಜಕೀಯ ಪಕ್ಷಗಳು ಜಾಹೀರಾತು ಪ್ರಕಟಣೆಗೆ ಅನುಮತಿ ಪಡೆಯಲು ನಿಗದಿತ ನಮೂನೆಗಳಲ್ಲಿ ಜಾಹೀರಾತು ಪ್ರಕಟಣೆಗೆ ಎರಡು ದಿನ ಮುಂಚಿತವಾಗಿ ಅಂದರೆ ಮೇ 04 ರೊಳಗೆ ಎಂ.ಸಿ.ಎಂ.ಸಿ ಸಮಿತಿಗೆ ಅರ್ಜಿ ಸಲ್ಲಿಸಬೇಕು ಎಂದು ಚುನಾವಣಾಧಿಕಾರಿಗಳು ಹಾಗೂ ಎಂ.ಸಿ.ಎಂ.ಸಿ ಸಮಿತಿಯ ಅಧ್ಯಕ್ಷರಾದ ನಲಿನ್ ಅತುಲ್ ತಿಳಿಸಿದ್ದಾರೆ.

# ರುದ್ರಾಂಬ ಎಂಪಿ ಪ್ರಕಾಶ ನಿಧನ

**ಹೂವಿನ ಹಡಗಲಿ:** ಉಪ ಮುಖ್ಯಮಂತ್ರಿಯಾಗಿದ್ದ ದಿ. ಎಂ.ಪಿ.ಪ್ರಕಾಶ ಅವರ ಧರ್ಮಪತ್ನಿ ಶ್ರೀಮತಿ ರುದ್ರಾಂಬ ಎಂ.ಪಿ.ಪ್ರಕಾಶ್(83) ಇವರು ಸೋಮವಾರ ಸಂಜೆ ವಯೋಸಹಜವಾಗಿ ಅವರ ತೋಟದ ಮನೆಯಲ್ಲಿ ನಿಧನರಾಗಿದ್ದಾರೆ. ಮೃತರಿಗೆ ಹರಪನಹಳ್ಳಿ ಶಾಸಕಿ ಎಂ.ಲತಾ ಸೇರಿದಂತೆ ಮೂವರು ಪುತ್ರಿಯರಿದ್ದಾರೆ. ಮೃತರ ಅಂತ್ಯಕ್ರಿಯೆ ಏ.30 ಮಂಗಳವಾರ ಸಂಜೆ 4.30ಕ್ಕೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.




ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ, ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ. ಡಿ.ವಿ.ಜಿ.

ವಿವೇಕಶ್ರೇಯಾಲಾಪ ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL VOCAL - KARNATIC AND FILM MUSIC Classes
contact for more information
91082 26938
90368 65666
Near Honda Showroom, Hosapete-583201

S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201





# ನೀವು ಮತ ಚಲಾಯಿಸಿ, ನಿಮ್ಮ ಪರಿವಾರದವರಿಗೂ ಮತದಾನ ಮಾಡುವಂತೆ ಪ್ರೇರೇಪಿಸಿ: ಜಿಲ್ಲಾಧಿಕಾರಿ ಪ್ರಶಾಂತ ಕುಮಾರ ಮಿಶ್ರಾ

**ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭಾ ಸಾರ್ವತ್ರಿಕ ಚುನಾವಣೆ ನಿಮಿತ್ಯ ಮೇ. 07 ರಂದು ಜರುಗುವ ಮತದಾನದಲ್ಲಿ ಪ್ರತಿಯೊಬ್ಬರೂ ಮತ ಚಲಾಯಿಸಿ ಹಾಗೂ ನಿಮ್ಮ ಕುಟುಂಬದ ಎಲ್ಲಾ ಅರ್ಹ ಮತದಾರರು ಸಹ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಲೋಕಸಭಾ ಸಾರ್ವತ್ರಿಕ ಚುನಾವಣೆ-2024ರ ಅಂಗವಾಗಿ ಕಳೆದ ಚುನಾವಣೆಗಳಲ್ಲಿ ಬಳ್ಳಾರಿ ನಗರದಲ್ಲಿ ಕಡಿಮೆ ಮತದಾನವಾದ ಮತಗಟ್ಟೆ ಕೇಂದ್ರಗಳ ವ್ಯಾಪ್ತಿಯನ್ನು ಗುರಿಯಾಗಿಸಿ, ಮತದಾರರಲ್ಲಿ ಜಾಗೃತಿ ಮೂಡಿಸಲು ಸೋಮವಾರದಂದು ನಗರದ ಅನಂತಪುರ ರಸ್ತೆಯ ಹೊಸ ಜಿಲ್ಲಾಡಳಿತ ಭವನದ ಆವರಣದಿಂದ ಏರ್ಪಡಿಸಿದ್ದ "ಬೈಕ್ ಜಾಥಾ" ಗೆ ಚಾಲನೆ ನೀಡಿ ಅವರು ಮಾತನಾಡಿದರುಚುನಾವಣೆಯು ಹಬ್ಬವಿದ್ದಂತೆ, ಪ್ರತಿಯೊಬ್ಬ ನಾಗರಿಕರು ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಂಡು ಹೆಮ್ಮೆಯಿಂದ ಮತ ಚಲಾಯಿಸುವ ಮೂಲಕ ಸಂಭ್ರಮದಿಂದ ಆಚರಿಸಬೇಕು ಎಂದರು.

# ಮನೆಯಿಂದಲೇ ಮತದಾನ ಆರಂಭ

**ಹಂಪಿ ಟೈಮ್ಸ್ ಹೊಸಪೇಟೆ**

ಸಾರ್ವತ್ರಿಕ ಲೋಕಸಭಾ ಚುನಾವಣೆ-2024ರ ಸಂಬಂಧ 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಮತ್ತು ವಿಶೇಷಚೇತನ ಮತದಾರರಿಗೆ ಮನೆಯಿಂದಲೇ ಮತದಾನ ಮಾಡುವ ಪ್ರಕ್ರಿಯೆ ಆರಂಭವಾಗಿದೆ.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ವಿಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹಿರಿಯ ನಾಗರಿಕರೊಬ್ಬರ ಮನೆಯಲ್ಲಿ ಮತದಾನ ಮಾಡುವ ಪ್ರಕ್ರಿಯೆ ಪರಿಶೀಲಿಸಿದರು. ಸಾರ್ವತ್ರಿಕ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆಯಲ್ಲಿ ಒಟ್ಟು 721 ಹಿರಿಯ ನಾಗರಿಕ ಮತದಾರರು ಹಾಗೂ 487 ವಿಶೇಷಚೇತನ ಮತದಾರರು ಇದ್ದಾರೆ. ವಿಜಯನಗರ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಮತ್ತು ವಿಶೇಷಚೇತನ ಮತದಾರರಿಗೆ ಮನೆಯಿಂದಲೇ ಮತದಾನ ಮಾಡುವ ಪ್ರಕ್ರಿಯೆ ಸುಗಮವಾಗಿ ನಡೆದಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.ಈ ಸಂದರ್ಭದಲ್ಲಿ ಹೊಸಪೇಟೆ ತಹಸೀಲ್ದಾರ ಶ್ರುತಿ ಎಂ.ಎಂ. ಇತರರು ಇದ್ದರು.




**ವಿಜಯನಗರ ಜಿಲ್ಲೆಯಲ್ಲಿ ಒಟ್ಟು 721 ಹಿರಿಯ ನಾಗರಿಕ ಮತದಾರರು 487 ವಿಶೇಷಚೇತನ ಮತದಾರರಿದ್ದಾರೆ.**

# ಮೇ 7ರಂದು ನಡೆಯುವ ಸಂತೆ, ಜಾತ್ರೆ ರದ್ದು

**ಹಂಪಿ ಟೈಮ್ಸ್ ಹೊಸಪೇಟೆ**

ಸಾರ್ವತ್ರಿಕ ಲೋಕಸಭಾ ಚುನಾವಣೆ-2024ರ ಸಂಬಂಧ ಮೇ 7ರಂದು ಮತದಾನ ನಡೆಯಲಿದ್ದು, ವಿಜಯ ನಗರ ಜಿಲ್ಲೆಯ ಒಟ್ಟು 05 ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮತದಾನ ಪ್ರಕ್ರಿಯೆಯು ಮುಕ್ತ ಹಾಗೂ ಶಾಂತಿಯುತವಾಗಿ ನಡೆಯಲು ಅನುಕೂಲವಾಗುವಂತೆ ಹಾಗೂ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಮೇ 7ರಂದು ವಿಜಯನಗರ ಜಿಲ್ಲಾದ್ಯಂತ ನಡೆಯಲಿರುವ ಸಂತೆ ಜಾತ್ರೆಗಳನ್ನು ರದ್ದುಪಡಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

# ಮೇ 1ರಿಂದ ಅಗತ್ಯ ಸೇವೆಗಳ ನೌಕರರು ಮತ ಚಲಾಯಿಸಿ

## ಡಿಸಿ ಮಿಶ್ರಾ ಹೇಳಿಕೆ। ಪೋಸ್ಟಲ್ ವೋಟಿಂಗ್ ಸೆಂಟರ್ ಸ್ಥಾಪನೆ। ಮೇ 3ವರೆಗೆ ಅವಕಾಶ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಲೋಕಸಭಾ ಸಾರ್ವತ್ರಿಕ ಚುನಾವಣೆ ಕರ್ತವ್ಯ ನಿಮಿತ್ಯ ಮತದಾನ ದಿನದಂದು ಗೈರು ಹಾಜರಿ ಹಾಗೂ ಅಗತ್ಯ ಸೇವೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಮೇ 01 ರಿಂದ 03 ರವರೆಗೆ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದ್ದು, ಇದಕ್ಕಾಗಿ ನಗರದ ರೈಲ್ವೆ ನಿಲ್ದಾಣ ಎದುರಿನ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿರುವ ಗಾಂಧಿ ಭವನದಲ್ಲಿ ಪೋಸ್ಟಲ್ ವೋಟಿಂಗ್ ಸೆಂಟರ್ ಸ್ಥಾಪಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಚುನಾವಣೆ ನಿಮಿತ್ಯ ಮೇ 07 ರಂದು ಮತದಾನ ನಡೆಯಲಿದ್ದು, ಅಂದು ಅಗತ್ಯ ಸೇವೆಯಲ್ಲಿ ಕರ್ತವ್ಯ ನಿರತರಾಗುವ ವಿವಿಧ ಕ್ಷೇತ್ರಗಳ ಸಿಬ್ಬಂದಿಗಳು ಮತದಾನದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಚುನಾವಣಾ ಆಯೋಗವು ಮತದಾನ ಮಾಡಲು ವಿಶೇಷ ಕಲ್ಪಿಸಿದೆ. ಇದಕ್ಕಾಗಿ ಚುನಾವಣಾ ಆಯೋಗ ಅಗತ್ಯ ಸೇವೆಗಳಡಿ ಗುರುತಿಸಿರುವ ವಿವಿಧ ಕ್ಷೇತ್ರಗಳ ಸಂಬಂಧಪಟ್ಟ ಅಧಿಕಾರಿಗಳಿಂದ ಅಂತಹ ಮತದಾರರನ್ನು ಗುರುತಿಸಲಾಗಿದ್ದು, ಅಂತಹ ಮತದಾರರು ತಮ್ಮ ಮತವನ್ನು ಚಲಾಯಿಸಲು ಮೇ 01 ರಿಂದ 03 ರವರೆಗೆ ಅವಕಾಶ ಒದಗಿಸಲಾಗಿದೆ.

ಜಿಲ್ಲೆಯಲ್ಲಿ ಕೆಪಿಸಿಎಲ್ ಸಂಸ್ಥೆಯ 65 ನೌಕರರು, ಆರೋಗ್ಯ ಇಲಾಖೆ-40, ವಿಮ್ಸ್-08, ಜಿಲ್ಲಾ ಆಸ್ಪತ್ರೆ-41, ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆ-423, ಅಗ್ನಿಶಾಮಕ ದಳ-67, ಮಾಧ್ಯಮದವರು-07, ಟ್ರಾಫಿಕ್ ಪೊಲೀಸ್-74, ಆರೋಗ್ಯ ಇಲಾಖೆ ಗುರುತಿಸಿರುವ ಆಂಬುಲೆನ್ಸ್ ಸಿಬ್ಬಂದಿ-25, ಕಾರಾಗೃಹ ಇಲಾಖೆ-82, ಕಂಟ್ರೋಲ್ ರೂಂ ನಲ್ಲಿ ಕಾರ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿ-30 ಸೇರಿದಂತೆ ಒಟ್ಟು 862 ಮತದಾರರಿಗೆ ಈಗಾಗಲೆ 12-ಡಿ ನಮೂನೆ ವಿತರಿಸಿ, ಭರ್ತಿ ಮಾಡಿದ ನಮೂನೆಯನ್ನು ಈಗಾಗಲೆ ಸ್ವೀಕರಿಸಲಾಗಿದೆ.

ಲೋಕಸಭಾ ಸಾರ್ವತ್ರಿಕ ಚುನಾವಣೆ-2024 ಸಂಬಂಧ ಕರ್ತವ್ಯ ನಿರತ ಗೈರು ಹಾಜರಿ ಮತದಾರರು ನಗರದ ರೈಲ್ವೆ ನಿಲ್ದಾಣ ಎದುರಿನ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿರುವ ಗಾಂಧಿ ಭವನದಲ್ಲಿ ಸ್ಥಾಪಿಸಲಾಗಿರುವ ಅಂಚೆ ಮತದಾನ ಕೇಂದ್ರಕ್ಕೆ (ಪೋಸ್ಟಲ್ ವೋಟಿಂಗ್ ಸೆಂಟರ್) ಮೇ 01 ರಿಂದ 03 ರವರೆಗೆ ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆಯವರೆಗಿನ ಅವಧಿಯಲ್ಲಿ ಆಗಮಿಸಿ ತಮ್ಮ ಮತ ಚಲಾಯಿಸಬಹುದು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.



# ದೇವಾಲಯದ ಧ್ವಜಸ್ತಂಭಗಳು

■ ಲೀಲಾವತಿ ವಿಜಯಕುಮಾರ, ಅಂಕಸಮುದ್ರ

ದೇವಾಲಯ ಆಗಮ ಶಾಸ್ತ್ರದಲ್ಲಿ "ದೇಹೋ ದೇವಾಲಯಃ ಪ್ರೋಕ್ತೋಃ"ಎಂದು ಹೇಳುತ್ತಾ, ದೇವಸ್ಥಾನವನ್ನು ಮಾನವನ ಶರೀರಕ್ಕೆ ಹೋಲಿಸಲಾಗಿದೆ. ಹೇಳುವುದಾದರೆ ಗರ್ಭಗುಡಿಯನ್ನು ತಲೆ/ಮೆದುಳಿಗೆ ಹೋಲಿಕೆ, ಹೀಗೆ ಹೇಳಬಹುದು. ಅದರಂತೆ ಧ್ವಜಸ್ತಂಭವು ಶರೀರದ ಬೆನ್ನುಹುರಿಯಂತೆ. ಈ ಬೆನ್ನುಹುರಿ ಸರಿಯಾಗಿ ಇದ್ದರೆ, ನೆಟ್ಟಗೆ ನಿಲ್ಲಲು ಸಾಧ್ಯ ಎಂಬುದು ಮೇಲ್ನೋಟ ಅರ್ಥವಾದರೆ, ಮಾನವನ ಉನ್ನತಿ, ಆಧ್ಯಾತ್ಮಿಕ ಸಾಧನೆಯನ್ನು ಧ್ವಜವು ಸಂಕೇತಿಸುವುದು. ದೇವಾಲಯದ ಇಂತಹ ಧ್ವಜಸ್ತಂಭಗಳು, ವಿಶೇಷವಾಗಿ ದಕ್ಷಿಣ ಭಾರತದ ದೇವಾಲಯ ವಾಸ್ತುಶಾಸ್ತ್ರದ ಪ್ರಮುಖ ಅಂಶ. ಪ್ರತಿ ದೇವಸ್ಥಾನದ ಮುಂದೆ, ಮುಖಮಂಟಪದ ನಂತರ ಗರುಡಗಂಭ/ನಂದಿಕಂಬ ನಂತರ ಬಲಿಪೀಠ, ಧ್ವಜಸ್ತಂಭಗಳಿರುವುದು ನೋಡಿರುತ್ತೇವೆ. ಯಾಕೆ ಈ ಧ್ವಜ ಸ್ತಂಭಗಳು ಎಂದರೆ, ಬಹಳ ಹಿಂದೆ, ಈಗಿನಂತೆ ಯಾವುದೇ ಸುದ್ದಿ ಮಾಧ್ಯಮಗಳು ಇರಲಿಲ್ಲ. ದೇವಾಲಯಗಳಲ್ಲಿ ಉತ್ಸವಗಳು, ರಥೋತ್ಸವಗಳು ನಡೆಯುವುದು ಸರ್ವೇ ಸಾಮಾನ್ಯ. ಜೊತೆಗೆ ತೀರ್ಥಯಾತ್ರೆಗಳು ಸಹ. ಜೊತೆಗೆ ಉತ್ಸವಗಳು ನಡೆಯುವುದನ್ನು, ಆಯಾ ನಾಡಿನ ಪ್ರತಿ ಪ್ರಜೆಗೂ ತಲುಪಿಸುವುದು ಅಷ್ಟೇ ಮಹತ್ವದ ಕಾರ್ಯವಾಗಿತ್ತು. ಹೀಗಾಗಿ ಆ ದೇವಾಲಯಗಳಲ್ಲಿ ಉತ್ಸವ, ರಥೋತ್ಸವ ನಡೆಯುವಾಗ, ಅಥವಾ ನಡೆಯುವ ಮುಂಚೆ, ಆಯಾ ದೇವಾಲಯದಲ್ಲಿ ಪ್ರತಿಷ್ಠಾಪಿಸಲ್ಪಟ್ಟ, ದೇವರ ವಾಹನದ ಚಿತ್ರವನ್ನು ಒಳಗೊಂಡ ಧ್ವಜವನ್ನು ಕಟ್ಟುತ್ತಿದ್ದರು. ಉದಾಹರಣೆಗೆ, ಶಿವ ದೇವಾಲಯವಾದರೆ ನಂದಿ ಧ್ವಜ, ವಿಷ್ಣು ದೇವಾಲಯವಾದರೆ ಗರುಡಧ್ವಜವನ್ನು ದೀಪಸ್ತಂಭಕ್ಕೆ ಕಟ್ಟುತ್ತಿದ್ದರು. ದೇವಾಲಯದಲ್ಲಿ ಧ್ವಜಸ್ತಂಭದಲ್ಲಿ ಧ್ವಜ ಹಾರಾಡುವುದು ನೋಡಿದರೆ, "ಇಲ್ಲಿ ಉತ್ಸವ, ಆರಾಧನೆ, ವಿಶೇಷ ದಿನ ನಡೆಯುತ್ತಿದೆ" ಎಂದು ಅರ್ಥ. ಈ ಧ್ವಜಸ್ತಂಭವು ಸಾಮಾನ್ಯವಾಗಿ ಪಂಚಲೋಹದ, ಅಥವಾ ಇನ್ನಿತರೇ ಲೋಹದ ಹೊರಕವಚವನ್ನು ಹೊಂದಿ, ಥೇಟ್ ಧ್ವಜದ ಆಕಾರ ಇರುವುದನ್ನು ಗಮನಿಸಿರಬಹುದು. ಜೊತೆಗೆ ಇದು ದೇವಾಲಯಕ್ಕೆ ಪ್ರಾಕೃತಿಕ ಎನರ್ಜಿಯನ್ನು ಸದಾ ನೀಡುತ್ತಾ ಕಾಪಿಡುತ್ತದೆ. ಲೋಹದ ಹೊರಕವಚ ಹೊಂದಿರುವುದರಿಂದ, ಸಿಡಿಲು ರೋಧಕವಾಗಿಯೂ ಕಾರ್ಯನಿರ್ವಹಿಸುವುದು. ಹೀಗೆ ಇವಕ್ಕೂ ಹೆಚ್ಚಿನ ವೈಜ್ಞಾನಿಕ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡು, ನಮ್ಮ ಪೂರ್ವಿಕರು ದೇವಾಲಯಗಳಿಗೆ ಬಲಿಪೀಠ, ಧ್ವಜಸ್ತಂಭಗಳನ್ನೆಲ್ಲಾ ನಿರ್ಮಿಸುತ್ತಿದ್ದರು.




## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಜಾಹೀರಾತಿಗಾಗಿ ಸಂಪರ್ಕಿಸಿ:
Contact for
EVENT COVERAGE
& Advertisements
in Leading
Hampi Times
Daily News Paper
M: 94486 33038


# ಮಲೆನಾಡ ಯೋಗ ಸಾಧಕಿ ಶಾಲಿನಿ

ಅದೊಂದು ದಿನ ಕಡೂರಿನಲ್ಲಿ ರಾಜ್ಯಮಟ್ಟದ ಯೋಗ ಸ್ಪರ್ಧೆ ನಡೆಯುತ್ತಿತ್ತು ಮೈಸೂರಿನಿಂದ ಕರೆಸಲ್ಪಟ್ಟ ಯೋಗಪಟುವನ್ನು ಅತಿಥಿಯಾಗಿ ಸನ್ಮಾನ ಮಾಡಿದ ಸಂದರ್ಭ ಮುಂದೊಂದು ದಿನ ನಾನು ಇದೇ ರೀತಿಯಲ್ಲಿ ಇಂತಹದೇ ವೇದಿಕೆಯಲ್ಲಿ ಸನ್ಮಾನಿತಳಾಗಬೇಕು ಎಂಬ ಪ್ರೇರಣೆಯೊಂದಿಗೆ, ತಾಯಿಯ ಛಲದ ನುಡಿ ನೀನು ಯೋಗ ತರಬೇತಿಯನ್ನು ಪಡೆಯುತ್ತಿದ್ದೀಯ ನೋಡು ಆ ಹೆಣ್ಣು ಮಗಳಿಗೆ ಯಾವ ರೀತಿಯ ಸನ್ಮಾನ ಮಾಡುತ್ತಿದ್ದಾರೆ ನನಗೂ ನಿನ್ನನ್ನು ಅಂತಹ ವೇದಿಕೆಗಳಲ್ಲಿ ಸನ್ಮಾನಿಸುವುದನ್ನು ನೋಡಬೇಕೆಂಬ ಆಸೆ ಇದೆ ಮುಂದೊಂದು ದಿನ ನೀನು ಈ ನನ್ನ ಆಸೆಯನ್ನು ನೆರವೇರಿಸಬೇಕು ಎಂದು ಛಲದಿಂದ ನುಡಿಯುತ್ತಾರೆ ಅಂಗನವಾಡಿಯ ಶಿಕ್ಷಕಿಯಾದ ತಾಯಿ ಶಶಿಕಲಾ ರವರು.

ಈಗಾಗಲೇ ತರಬೇತಿ ಪಡಿಯುತಿದ್ದ ಶಾಲಿನಿ ಮನಸ್ಸಿನಲ್ಲಿ ದೃಢ ಸಂಕಲ್ಪ ಮಾಡಿ ಮುಂದೊಂದು ದಿನ ತಾಯಿ ಈ ಸಂತೋಷದ ಕ್ಷಣವನ್ನು ಕಣ್ತುಂಬಿಕೊಳ್ಳಬೇಕು ಎಂಬ ಹಠದೊಂದಿಗೆ ಮಾಡಿದ ಕಠಿಣ ಅಭ್ಯಾಸ ರಾಷ್ಟ್ರ ,ಅಂತರಾಷ್ಟ್ರ ಮಟ್ಟದಲ್ಲಿಗಳಿಸಿದ ಹಲವಾರು ಪದಕಗಳು ಗೌರವ ಸನ್ಮಾನಗಳನ್ನು ತಾಯಿಯು ಕಣ್ತುಂಬಿ ಕೊಳ್ಳುವಂತೆ ಮಾಡಿದ್ದು ಸ್ಮರಣೀಯ. ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ದಿ. ಗಣೇಶ ಆಚಾರಿ ಮತ್ತು ಶಶಿಕಲಾ ಇವರ ಮಗಳಾಗಿ ಜನಿಸಿದ ಇವರು 1–7 ತರಗತಿವರೆಗೆ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಕೋಟೆ, 8–10ನೇ ತರಗತಿವರೆಗೆ ಶ್ರೀ ತರಳಬಾಳು ಜಗದ್ಗುರು ವಿದ್ಯಾ ಸಂಸ್ಥೆಯ ವೇದಾವತಿ ಬಾಲಿಕಾ ಪ್ರೌಢಶಾಲೆ, ಪದವಿಪೂರ್ವ ಮತ್ತು ಪದವಿ ಶಿಕ್ಷಣವನ್ನುಸ್ಥಳೀಯಸರ್ಕಾರಿಕಾಲೇಜುಗಳಲ್ಲಿಪೂರ್ಣಗೊಳಿಸಿರುತ್ತಾರೆ. ಶ್ರೀಯುತ ದರ್ಶನ್ ದೈಹಿಕ ಶಿಕ್ಷಣ ಶಿಕ್ಷಕರಿಂದ ಮಾರ್ಗದರ್ಶನ ಪಡೆದ ಇವರು ಹೆಚ್ಚುವರಿ ತರಬೇತಿಯನ್ನು ಗಿರೀಶ್ ಯೋಗ ತರಬೇತುದಾರರು ಶ್ರೀ ರಾಘವೇಂದ್ರ ಯೋಗ ಶಿಕ್ಷಣ ಕೇಂದ್ರ ಕಡೂರು ಇವರಲ್ಲಿ ಪಡೆದುಕೊಳ್ಳುತ್ತಾರೆ.

ಕ್ರೀಡಾಸಾಧನೆಗೈದ ಇವರಿಗೆ ಅನೇಕ ಪ್ರಶಸ್ತಿ, ಪುರಸ್ಕಾರಗಳು ಮುಡಿಗೇರಿವೆ. ತಂದೆ ಕಳೆದುಕೊಂಡ ವಿದ್ಯಾರ್ಥಿನಿ ಈ ಮಟ್ಟಕ್ಕೆ ಬೆಳೆದು ಜಿಲ್ಲೆಗೆ ಕೀರ್ತಿ ತಂದದ್ದು ನಿಜಕ್ಕೂ ಸಾಧನೆ. ನಾವೆಲ್ಲ ತುಂಬಾ ಸಹಕಾರ ನೀಡಿದ್ದೇವೆ, ಸಾಧಿಸುವ ಛಲ ಹೊಂದಿರುವ ಇವರಿಗೆ ರಾಘವೇಂದ್ರ ಯೋಗ ಶಿಕ್ಷಣ ಕೇಂದ್ರ ಸದಾ ಬೆನ್ನೆಲುಬಾಗಿ ನಿಂತು ಸಹಕರಿಸಲಿದೆ ಎಂದು ಹೇಳುತ್ತಾರೆ ತರಬೇತು ದಾರರಾದ ಗಿರೀಶ್.

ತಂದೆಯನ್ನು ಕಳೆದು ಕೊಂಡು ತಾಯಿಯ ಆಸರೆಯಲ್ಲಿ ಬೆಳೆದ ಇವರಿಗೆ ತಂದೆಯ ಪ್ರೀತಿಯನ್ನು ಪತಿ ಸೋಮ ಶೇಖರ್ ರವರು ನೀಡುತ್ತಿದ್ದು ಇವರೆಲ್ಲ ಸಾಧನೆಗಳಿಗೆ ಬೆನ್ನೆಲು ಬಾಗಿದ್ದಾರೆ ವಿದ್ಯಾಭ್ಯಾಸಕ್ಕೆ ಮಾರ್ಗ ದರ್ಶನ ಮತ್ತು ಸಹಕಾರವನ್ನು ನೀಡುತ್ತಿದ್ದಾರೆ.

ಯೋಗ ತರಬೇತಿ ಪಡೆಯುವಾಗ ಚಿಕ್ಕ ಮಗುವನ್ನು ತಾವೇ ನೋಡಿ ಕೊಂಡು ಪ್ರೋತ್ಸಾಹದಾಯಕ ರಾಗಿದ್ದಾರೆ. ಹೆಣ್ಣು ಮಕ್ಕಳು ಓದಬೇಕು ಎಂಬ ಆಸೆ ಹೊಂದಿರುವ ಇವರು ಯೋಗ ವಿಷಯದಲ್ಲಿ ಎಂ, ಎಸ್ಸಿ. ಪದವಿಯನ್ನು ಪಡೆ ಯಲು ಸಹಕರಿಸುತ್ತಿ ದ್ದಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper



### ಪ್ರಶಸ್ತಿ ಪುರಸ್ಕಾರಗಳು

ಕಡೂರು ತಾಲೂಕು ಆಡಳಿತದಿಂದ 'ತಾಲೂಕು ಕ್ರೀಡಾ ಪ್ರಶಸ್ತಿ'ನೀಡಿ ಗೌರವಿಸಿದೆ., ಚಿಕ್ಕಮಗಳೂರಿನ ಜಿಲ್ಲಾಡಳಿತವು ಮೂರು ಬಾರಿ 'ಜಿಲ್ಲಾಮಟ್ಟದ ಕ್ರೀಡಾ ಸಾಧಕಿ ಪ್ರಶಸ್ತಿ' ನೀಡಿ ಗೌರವಿಸಿದೆ., 53ನೇ ಕನ್ನಡ ರಾಜ್ಯೋತ್ಸವ ಜಯ ಕರ್ನಾಟಕ ಸಂಘಟನೆ 'ಪೂರ್ಣಚಂದ್ರ ತೇಜಸ್ವಿ ಪ್ರಶಸ್ತಿ'ನೀಡಿ ಗೌರವಿಸಿದೆ., ಬೆಂಗಳೂರಿನ ಶಿಕ್ಷಣ ಜ್ಞಾನ ಮಾಸಪತ್ರಿಕೆ 2017ರಲ್ಲಿ 'ಯೋಗಾ ಶಿಕ್ಷಣ ರತ್ನ ಪ್ರಶಸ್ತಿ' ನೀಡಿ ಗೌರವಿಸಿದೆ.

ಈಗಾಗಲೇ ಯೋಗ ಇನ್ಸ್ಟ್ರಕ್ಟರ್ ಎಸ್– ವ್ಯಾಸ (ಜಿಗಣಿ, ಬೆಂಗಳೂರು) ವಿಶ್ವವಿದ್ಯಾನಿಲಯದಿಂದ ಪ್ರಮಾಣ ಪತ್ರವನ್ನು ಪಡೆದಿರುತ್ತಾರೆ. ಯೋಗ ತೀರ್ಪುಗಾರರ ಪರೀಕ್ಷೆಯನ್ನು ಉತ್ತೀರ್ಣರಾಗಿದ್ದು ಮುಂದೆ ಯೋಗ ತರಬೇತುದರಾಳಾಗಿ ಕಲಿಕೆಯಲ್ಲಿ ಆಸಕ್ತಿವುಳ್ಳ ಕ್ರೀಡಾಪಟುಗಳಿಗೆ ತರಬೇತಿ ನೀಡಬೇಕೆಂಬ ಸಂಕಲ್ಪವನ್ನು ಹೊಂದಿದ್ದಾರೆ.

ಸರ್ಕಾರವು ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಉದ್ಯೋಗಾವಕಾಶ, ವಿಶೇಷ ತರಬೇತಿ, ಕೆಲಸ ಸಿಗುವ ತನಕ ಪ್ರೋತ್ಸಾಹ ಧನ ನೀಡುವ ಮುಖಾಂತರ ಅವರ ಆರ್ಥಿಕ ಕಷ್ಟಕ್ಕೆ ನೆರವಾಗಬೇಕು.ಮಹಿಳೆಯರು ಹೆಚ್ಚು ಹೆಚ್ಚು ಯೋಗ ಕಲಿಯಬೇಕು ಇದರಿಂದ ಮಾನಸಿಕ ಮತ್ತು ದೈಹಿಕ ಸದೃಢತೆ ಹೊಂದುವುದರೊಂದಿಗೆ ರೋಗನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳುವುದರ ಮುಖಾಂತರ ಆರೋಗ್ಯವಾಗಿರಬಹುದು ಧ್ಯಾನ, ಮುದ್ರೆಗಳ ಮೂಲಕ ಸಂಸಾರಿಕ ಒತ್ತಡವನ್ನು ತೊಡೆದುಹಾಕಿ ಶಾಂತಿಯನ್ನು ಸಾಧಿಸಬಹುದು ಎಂದು ಹೇಳುತ್ತಾರೆ.

ಯುವ ಕ್ರೀಡಾಪಟುಗಳೇ ಕಠಿಣ ತರಬೇತಿ ಉತ್ತಮ ಮಾರ್ಗದರ್ಶನ ನಿರಂತರತೆಯಿಂದ ಮಾತ್ರ ಸಾಧನೆ ಸಾಧ್ಯ. ಸೋಲುಂಡ ಮಾತ್ರಕ್ಕೆ ಹಿಂದೆ ಸರಿಯಬೇಡಿ ಗೆದ್ದವರಿಂದ ಮತ್ತು ಸೋತವರಿಂದ ಕಲಿಯುವುದು ಸಾಕಷ್ಟಿದೆ ಅದನ್ನು ತಿಳಿದು ಸಾಧಿಸಿ ಎಂಬ ಕರೆಯನ್ನು ನೀಡುತ್ತಾರೆ.

ಯಾವುದೇ ಸ್ಪರ್ಧೆಗಳು ಸರಳವಾಗಿಲ್ಲ ಕ್ಲಿಷ್ಟತೆಯನ್ನು ಹೊಂದಿವೆ ಆದರೆ ಸಾಧನೆ ಏನು ಕಷ್ಟವಲ್ಲ ಸಾಧಿಸುವ ಛಲ ನಿಮ್ಮಲ್ಲಿರಬೇಕು ಯೋಗ ಭಾರತದ ಅಸ್ಮಿತೆ ಇದರ ಬಗ್ಗೆ ನನಗೆ ಗರ್ವ ಇದೆ ನಾನು ವಿದೇಶಗಳಲ್ಲಿ ನನ್ನ ದೇಶದ ಧ್ವಜವನ್ನು ಹಿಡಿದಾಗ ನನ್ನೆದೆಯಲ್ಲಿ ಜನಗಣಮನದ ದುದುಂಬಿ ನನಗಿಂದಿಗೂ ಮೈ ನವಿರೇಳಿಸುತ್ತದೆ.

ವಿದೇಶಿಗರು ನಾವು ಯೋಗಭಂಗಿಗಳನ್ನು ಮಾಡುವಾಗ ತೆಗೆದುಕೊಳ್ಳುತ್ತಿದ್ದ ಛಾಯಾಚಿತ್ರ, ವಿಡಿಯೋ ಬೈಟ್ ಗಳು ನಮ್ಮ ಯೋಗಾಕಿರುವ ತಾಕತ್ತನ್ನು ತಿಳಿಸುತ್ತದೆ ಎಂದು ಗರ್ವದಿಂದ ನುಡಿಯುತ್ತಾರೆ ಶಾಲಿನಿ. ಸದ್ಯ ಹೆಣ್ಣು ಮಗುವಿನ ತಾಯಿಯಾಗಿ ವಿಶ್ರಾಂತಿ ಪಡೆಯುತ್ತಿದ್ದು ಮುಂದಿನ ದಿನಗಳಲ್ಲಿ ಯೋಗಕ್ಕೆ ಮರಳುತ್ತೇನೆ ಇನ್ನಷ್ಟು ಸಾಧನೆಗಳನ್ನು ಮಾಡುತ್ತೇನೆ. ಸಹಕಾರ ನೀಡಿದ ಸರ್ವರಿಗೂ ನಾನು ಆಭಾರಿಯಾಗಿದ್ದೇನೆ ಮುಂದೆಯೂ ನನಗೆ ಸಹಕಾರ ನೀಡಿ ಎಂದು ವಿನಯದಿಂದ ಕೇಳಿಕೊಳ್ಳುತ್ತಾರೆ ಅಂತರರಾಷ್ಟ್ರೀಯ ಯೋಗಾ ಸಾಧಕಿ ಶಾಲಿನಿ. ಹೆಣ್ಣು ಅಬಲೆಯಲ್ಲ ಸಬಲೇ, ಅವಳಿಗೆ ಬೇಕಾಗಿರುವುದು ಹೆಣ್ಣೆಂಬ ದುರ್ಬಲ ಹೇಳಿಕೆಯಲ್ಲ, ನಾವು ನಿನ್ನೊಂದಿಗಿದ್ದೇವೆಂಬ ನಲ್ನುಡಿ ಇವರ ಮತ್ತಷ್ಟು ಸಾಧನೆಗೆಯಾಗುವುದು ಮುನ್ನುಡಿ.

### ಕ್ರೀಡಾ ಸಾಧನೆಗಳು

2017(ಸಿಂಗಾಪುರ)7ನೇ ಅಂತರರಾಷ್ಟ್ರೀಯ ಯೋಗ ಸ್ಪರ್ಧೆ 25 ರಿಂದ 30 ವಯೋಮಿತಿಯ ವಿಭಾಗದಲ್ಲಿ ಚಿನ್ನದ ಪದಕ,ರಿದಮಿಕ್ ಯೋಗಾದಲ್ಲಿ 6ನೇ ಸ್ಥಾನ ಪಡೆದಿರುತ್ತಾರೆ.

2006 (ಹಿಸಾರ)30ನೇ ರಾಷ್ಟ್ರೀಯ ಯೋಗ ಸ್ಪರ್ಧೆಯಲ್ಲಿ ತೃತೀಯ ಸ್ಥಾನ., 2008(ರಾಂಚಿ)32ನೇ ರಾಷ್ಟ್ರೀಯ ಯೋಗಾ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ., 2009(ಮದುರೈ)33ನೇ ರಾಷ್ಟ್ರೀಯ ಯೋಗಾ ಸ್ಪರ್ಧೆ ದ್ವಿತೀಯ ಸ್ಥಾನ., 2010(ಯಮುನನಗರ)34ನೇ ರಾಷ್ಟ್ರೀಯ ಯೋಗಾ ಸ್ಪರ್ಧೆಯಲ್ಲಿ ಆರ್ಟಸ್ಟಿಕ್ಟ್ ಯೋಗಾದಲ್ಲಿ ಚಿನ್ನ,ಆಸನ ವಿಭಾಗದಲ್ಲಿ ಬೆಳ್ಳಿಯ ಪದಕ., 2010(ಗೋವಾ) 35ನೇ ರಾಷ್ಟ್ರೀಯ ಯೋಗಾ ಸ್ಪರ್ಧೆಯಲ್ಲಿ ಆರನೇ ಸ್ಥಾನ., 2011(ಧರ್ಮಸ್ಥಳ)36ನೇ ರಾಷ್ಟ್ರೀಯ ಯೋಗ ಸ್ಪರ್ಧೆ ನಾಲ್ಕನೇ ಸ್ಥಾನ., 2014(ಹೈದರಾಬಾದ್)39ನೇ ರಾಷ್ಟ್ರೀಯ ಯೋಗ ಸ್ಪರ್ಧೆ 6ನೇ ಸ್ಥಾನ., 2016(ಮೂಡುಬಿದರೆ)40ನೇ ರಾಷ್ಟ್ರೀಯ ಯೋಗ ಸ್ಪರ್ಧೆ 5 ನೇ ಸ್ಥಾನ., 2016(ಜಾರ್ಖಂಡ್)41ನೇ ರಾಷ್ಟ್ರೀಯ ಯೋಗ ಸ್ಪರ್ಧೆ ನಾಲ್ಕನೇ ಸ್ಥಾನ., 2016 ಉಡುಪಿ ಪ್ರಥಮ ಸೌತ್ ಇಂಡಿಯಾ ಯೋಗ ಕಾಂಪಿಟೇಶನ್ ವೈಯಕ್ತಿಕ ವಿಭಾಗದಲ್ಲಿ ಚಿನ್ನ,ಆರ್ಟಿಸ್ಟ್ ಸಿಂಗಲ್ ವಿಭಾಗದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ., 2016 (ಬೆಂಗಳೂರು)ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಹಿಮಾಲಯನ್ ಯೋಗ ಒಲಂಪಿಯಾಡ್ ಸ್ಪರ್ಧೆಯಲ್ಲಿ ಚಿನ್ನ., 2017(ಕೇರಳ)ಮೊದಲ ಫೆಡರೇಶನ್ ಸ್ಪೋರ್ಟ್ಸ್ ಕಾಂಪಿಟೇಶನ್ ನಲ್ಲಿ ವೈಯಕ್ತಿಕ ಯೋಗದಲ್ಲಿ ಮೂರನೇ ಸ್ಥಾನ, ಆರ್ಟಿಸ್ಟಿಕ್ಸ್ ಸೋಲೋ ಮೂರನೇ ಸ್ಥಾನ.

2004–ತೃತೀಯ,2005–ದ್ವಿತೀಯ–2006 ಪ್ರಥಮ,2008–ಪ್ರಥಮ, 2009–ಪ್ರಥಮ., ಸ್ಕೂಲ್ ಗೇಮ್ಸ್ ಗಳಲ್ಲಿ ಭಾಗವಹಿಸಿ ಪದಕಗಳನ್ನು ಗಳಿಸಿರುತ್ತಾರೆ., 2008–2009 ರಲ್ಲಿ 2 ಬಾರಿ ಚಾಂಪಿಯನ್ ಆಫ್ ಚಾಂಪಿಯನ್ ರಾಗಿರುತ್ತಾರೆ., 05 ಬಾರಿ ರಾಷ್ಟ್ರೀಯ ಹಲವಾರು ರಾಜ್ಯ,ಜಿಲ್ಲಾ ಮಟ್ಟದ ತೆರೆದ, ಮುಕ್ತ, ಆಹ್ವಾನಿತ ಯೋಗ ಸ್ಪರ್ಧೆಗಳಲ್ಲಿ ಭಾಗವಹಿಸಿ ರಾಜ್ಯ ಮತ್ತು ಜಿಲ್ಲೆಗೆ ಕೀರ್ತಿ ತಂದಿರುತ್ತಾರೆ.

**ಭೂಮಿಯಲ್ಲಿರುವ ಎಲ್ಲಾ ಪ್ರೀತಿಯಲ್ಲಿ ಮೋಸವಿದೆ ಆದರೆ ತಾಯಿಯ ಪ್ರೀತಿಯಲ್ಲಿ ಮೋಸವಿಲ್ಲ. ಕರುಣೆ, ಮಮತೆ, ನಂಬಿಕೆ, ವಾತ್ಸಲ್ಯ ಮೇಲಾಗಿ ಭಾವನೆ ಇದೆ. ಮುಕ್ಕೋಟಿ ದೇವರಿಗೂ ಮಿಗಿಲಾದವಳು ಮಹಾತಾಯಿ.**

# ತಾಯಿಯ ಒಡಲು–ಬಂಗಾರದ ಕಡಲು

ತಾಯಿಯು ಒಂದು ಪದವಾಗಿದ್ದು ಅದು ಸ್ವತಃ ಪರಿಪೂರ್ಣ ಪದವಾಗಿದೆ. ನಮ್ಮ ಅಸ್ತಿತ್ವಕ್ಕೆ ತಾಯಿಯೇ ಮೂಲ ಕಾರಣ. ತಾಯಿ ನಮ್ಮ ಜನ್ಮದಲ್ಲಿ ದೇವರ ಸಂಗಾತಿ. ನಾವು ದೇವರನ್ನು ನೋಡಿಲ್ಲ, ಮುಟ್ಟಿಲ್ಲ, ಆದರೆ ದೇವರನ್ನು ಕಂಡರೆ ಅದು ತಾಯಿಯಂತಾಗಬಹುದು.

ತಾಯಿಯೇ ಮೊದಲ ಗುರು ಎಂದು ನಮ್ಮ ಶಾಸ್ತ್ರಗಳಲ್ಲಿ ಹೇಳಲಾಗಿದೆ, ತಾಯಿಯ ಸೇವೆಯು ಎಲ್ಲಾ ದೇವರ ಸೇವೆ ಮಾಡಿದ ಪ್ರತಿಫಲವಾಗಿದೆ. ಈ ಭೂಮಿಯ ಮೇಲೆ ದೇವರು ಎಲ್ಲಾ ಕಡೆ ಇರಲು ಅಸಾಧ್ಯವೆಂದು ತಿಳಿದು, ಪ್ರತಿ ಮನೆ ಮನೆಗೆ ಒಬ್ಬ ಮಹಾ ತಾಯಿಯನ್ನು ಕಲ್ಪಿಸಿದ. ಅವಳೇ ನಮ್ಮ ಜನ್ಮಕ್ಕೆ ಕಾರಣೀಭೂತರಾದ ಮಹಾ ತ್ಯಾಗಿ ಜನನಿ. ಒಮ್ಮೊಮ್ಮೆ ನಮ್ಮೊಂದಿಗಿರುವ ಎಲ್ಲಾ ಸಂಬಂಧಗಳು ಶೂನ್ಯವೆನಿಸಬಹುದು. ಆದರೆ ತಾಯಿಯ ಸಂಬಂಧಕ್ಕೆ ಮಿತಿಯೇ ಇಲ್ಲ. ಅದು ಒಂದು ರೀತಿಯ ಕರುಳು ಬಳ್ಳಿಯ ಸಂಬಂಧವಾದದ್ದರಿಂದ ಉಸಿರಿನ ಕೊನೆಯ ಘಳಿಗೆಯ ಆಚೆಗೂ ಮರೆಯದ ಸಂಬಂಧವಾಗಿದೆ. ಉಪ್ಪಿಗಿಂತ ರುಚಿ ಇಲ್ಲ ತಾಯಿಗಿಂತ ಬಂಧುವಿಲ್ಲ ಎಂಬ ಗಾದೆ ಹೇಳುತ್ತದೆ ತಾಯಿಯ ಅಮೂಲ್ಯವಾದ ಸಂಬಂಧವನ್ನು. ಪ್ರತಿ ಮಗುವಿಗಾಗಿ ಚಿಂತಿಸುವ, ಯೋಚಿಸುವ ಆ ಮಗುವಿನ ಉಜ್ವಲ ಭವಿಷ್ಯಕ್ಕೆ ಹಗಲಿರುಳು ಎನ್ನದೆ ತನ್ನ ಜೀವನವನ್ನೇ ಮುಡಿಪಾಗಿಟ್ಟ ತಾಯಿಯ ಬಗ್ಗೆ ವರ್ಣಿಸಲು ಪದಗಳ ಕೊರತೆ ಬಹಳವಿದೆ. ದಿನನಿತ್ಯದ ಬೆಳಗಿನಿಂದ ರಾತ್ರಿಯವರೆಗಿನ ಮನೆಯ ಎಲ್ಲ ಕೆಲಸ ಕಾರ್ಯಗಳ ಜೊತೆಗೆ ಕುಟುಂಬದ ಸಂಪೂರ್ಣ ಜವಾಬ್ದಾರಿ ಹೊತ್ತವಳು ತಾಯಿ. ಅದಕ್ಕಾಗಿಯೇ ಹೇಳಿದ್ದು "ಮಾತೃದೇವೋಭವ" ಎಂದು. ಈ ಭೂಮಿಯ ಮೇಲೆ ಬ್ರಹ್ಮ ಬರೆಯುವ ಹಣೆಬರಹವನ್ನು ತಾಯಿ ಏನಾದರೂ ಬರೆದಿದ್ದರೆ ಯಾವ ಕೆಟ್ಟ ಮಕ್ಕಳು ಕೂಡ ಹುಟ್ಟುತ್ತಿರಲಿಲ್ಲ. ತಾಯ್ತನ ಬಂದಮೇಲೆ ಹೆಣ್ಣು ಮಗಳು ದೇವರಾಗಿ ಕಾಣುವಳು.

ಅಮ್ಮಾ.... ಅದೆಷ್ಟು ಹಿತ ಈ ನುಡಿ ಭೂಮಿಗೆ ಬಿದ್ದಾಕ್ಷಣ ನಾ ಹೇಳಿದ್ದು ಆ ನೋವಿನಲ್ಲೂ ಅದೆಂತಹ ಸಾರ್ಥಕ ನಗು ಹೊರಲು ಭಾರವಿಲ್ಲ, ಹೆರುವ ಕಷ್ಟ ಕಷ್ಟವೇ ಅಲ್ಲ ಎಂದೆಣಿಸಿ ಜೀವ ಕೊಟ್ಟವಳು ಅಮ್ಮ. ತಾಯಿ ಎಂದರೆ ಆಕಾಶದಲ್ಲಿ ಮಿನುಗುತ್ತಾ ಬದುಕು ನೀಡುವ ಬೆಳಕು. ತಾಯಿ ಎಂದರೆ ಹೊಸ ಜೀವಿಯನ್ನು ಅಸ್ತಿತ್ವಕ್ಕೆ ತರುವವಳು ತನ್ನ ದೇಹವನ್ನು ಸಹ ತ್ಯಾಗ ಮಾಡುವ ತ್ಯಾಗಮಹಿ ಅವಳು. ತಾಯಿ ಎಂದರೆ ಎಲ್ಲ ನೋವುಗಳನ್ನು ಬದಿಗೊತ್ತಿ ಮಕ್ಕಳ ಭವಿಷ್ಯಕ್ಕೆ ಜೀವನ ಮುಡಿಪಾಗಿಟ್ಟ ತ್ಯಾಗಮಯಿ. ತಾಯಿ ಎಂದರೆ ತನಗೆ ಹಸಿವಿದ್ದರೂ ಹಸಿವಿಲ್ಲ ನೀವು ಊಟ ಮಾಡಿರಿ ಎಂದು ಹೇಳುವ ಮಾತೃದೇವತೆ ತಾಯಿ. ಒಂದು ವೇಳೆ ಅವಕಾಶವಿದ್ದರೆ ತನ್ನ ಜೀವಿತಾವಧಿಯ ಅರ್ಧ ಆಯುಷ್ಯವನ್ನೇ ಮಕ್ಕಳಿಗೆ ಮೀಸಲಿಡುವ ಕರುಣಾಮಯಿ. ತಾಯಿ ಎಂದರೆ ಎಲ್ಲೇ



ಇರಿ ಹೇಗೇ ಇರಿ ಎಂದೆಂದಿಗೂ ಸುಖವಾಗಿ ನೆಮ್ಮದಿಯಿಂದ ಬದುಕಿರಿ ಎಂದು ಆಶೀರ್ವದಿಸುವ ಕಾಮಧೇನು. ತಾಯಿ ಎಂದರೆ ಸಾಕ್ಷಾತ್ ಕಣ್ಣಿಗೆ ಕಾಣುವ ದೇವರು. ನೆನಪಿರಲಿ ಮುಖದ ಕಣ್ಣಿಗೆ ಕಾಣುವ ಸಾವಿರ ದೇವರಿಗಿಂತ ಮನದ ಕಣ್ಣಿಗೆ ಕಾಣುವ ತಾಯಿ ಎಂಬ ಒಬ್ಬ ದೇವರೇ ಶ್ರೇಷ್ಠ. ತನಗೆ ಎಷ್ಟೇ ಕಷ್ಟವಿದ್ದರೂ ತನ್ನ ಮಕ್ಕಳು ಕೆಟ್ಟು ಹೋಗಬಾರದೆಂದು ಬೆಳೆಸುವ ಜವಾಬ್ದಾರಿಯ ವ್ಯಕ್ತಿ ತಾಯಿ. ಕವಿ ಹೇಳುವಂತೆ "ಪ್ರೀತಿ ಯಾವಾಗಲೂ ಗೆಲ್ಬೇಕು, ಗೆಲ್ಲೋ ಪ್ರೀತಿ ತಾಯಿಯ ಪ್ರೀತಿಯಾಗಬೇಕು. ಕಾರಣ ತಾಯಿಯ ಪ್ರೀತಿಗೆ ಯಾವತ್ತೂ ಸಾವೇ ಇಲ್ಲ". ಅಂತಹ ಸಾವಿರದ ಪ್ರೀತಿಯನ್ನು ಪಡೆದ ನಾವೇ ಧನ್ಯರು. ಇದರೊಂದಿಗೆ ತಾಯಿಯನ್ನು ಪ್ರೀತಿ ಮತ್ತು ತ್ಯಾಗದ ಸಂಕೇತವೆಂದು ಪರಿಗಣಿಸಲಾಗಿದೆ.

ದೇವರ ಹೋಲಿಕೆಗೆ ಸರಿ ಸಾಟಿ, ದೇವರ ಪ್ರತಿ ರೂಪ ಹೊತ್ತವಳು ಜೀವ ಕೊಟ್ಟಳು ಜೀವನ ನಡೆಸುವಳು ತಾಯಿ. ದೇವರಿಗಿಂತ ದೊಡ್ಡವರು ತಾಯಿ, ಕಾರಣ ದೇವರಿಗೆ ಜನ್ಮ ಕೊಟ್ಟವಳು ತಾಯಿ. ರಾಮ,ಕೃಷ್ಣ, ಬಸವಣ್ಣ,ಬುದ್ಧ ಹಾಗೂ ಮಹಾವೀರ ಇವರೆಲ್ಲ ದೇವರೆಂದ ಮೇಲೆ, ಇವರಿಗೆ ಜನ್ಮ ಕೊಟ್ಟ ತಾಯಿ ಮಹಾನ್ ದೇವರು. ಅದಕ್ಕಾಗಿಯೇ ಹೇಳಿದ್ದು ತಾಯಿಯೇ ದೇವರೆಂದು.

ಯಾವ ಕವಿಯೂ ವರ್ಣಿಸಲಾಗದ, ಯಾವ ಚಿತ್ರಕಾರನು ಚಿತ್ರಿಸಲಾಗದ, ಯಾವ ಕತೆಗಾರನಿಗೂ ಬರೆಯಲಾಗದ, ಯಾರೂ ಊಹಿಸಲಾಗದ, ಯಾರೂ ಬಣ್ಣಿಸಲಾಗದ ವ್ಯಕ್ತಿತ್ವದ ರೂವಾರಿ ಯಾರಾದರೂ ಇದ್ದರೆ ಅದು ತಾಯಿ ಮಾತ್ರ.ಯಾರೇ ಏನೇ ಕಂಡು ಹಿಡಿದರೂ ಅವಳ ಎದೆಯ ಹಾಲಿಗಿಂತ ಅಮೃತವಿಲ್ಲ! ನಾ ಓದಿ ತಿಳಿದ ಭಾಷೆ ಬೇರೆ .ಭಾವವೊಂದೇ ಇನ್ನೂ ಸಂಶೋಧಿಸಿ ಕಂಡು ಹಿಡಿಯಿರಿ ಅವಳು ಯಾರಿಗೂ ನಿಲುಕದ ಮಹಾಜ್ಞಾನಿಯವಳು.

ಒಂಬತ್ತು ತಿಂಗಳು ಹೊತ್ತು ನೋವಿನಲ್ಲಿ ಹೆತ್ತು ಸುಮಾರು ವರ್ಷಗಳ ಕಾಲ ಲಾಲನೆ ಪಾಲನೆ ಮಾಡಿ ನಮ್ಮ ಕಾಲ ಮೇಲೆ ನಾವು ನಿಲ್ಲುವಂತೆ ಮಾಡಿದ ತಾಯಿಯನ್ನು ಎಂದೆಂದಿಗೂ ತಿರಸ್ಕರಿಸದೆ ಉಸಿರಿರೋವರೆಗೂ ತಾಯಿಯೇ ಸೇವೆ ಮಾಡಿ ಅವಳ ಪ್ರೀತಿಗೆ ಪಾತ್ರರಾಗೋಣ. ಎಷ್ಟೋ ಜನ ಮಕ್ಕಳಿಗೆ ತಾಯಿ ಇರುವುದಿಲ್ಲ, ಎಷ್ಟೋ ಜನ ತಾಯಂದಿರಿಗೆ ಮಕ್ಕಳು ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ನಾವೆಷ್ಟು ಪುಣ್ಯವಂತರು ಎಂಬುದನ್ನು ಯೋಚಿಸಬೇಕಾಗಿದೆ. ಭೂಮಿಯಲ್ಲಿರುವ ಎಲ್ಲಾ ಪ್ರೀತಿಯಲ್ಲಿ ಮೋಸವಿದೆ ಆದರೆ ತಾಯಿಯ ಪ್ರೀತಿಯಲ್ಲಿ ಮೋಸವಿಲ್ಲ. ಕರುಣೆ, ಮಮತೆ, ನಂಬಿಕೆ, ವಾತ್ಸಲ್ಯ ಮೇಲಾಗಿ ಭಾವನೆ ಇದೆ. ಮುಕ್ಕೋಟಿ ದೇವರಿಗೂ ಮಿಗಿಲಾದವಳು ಮಹಾತಾಯಿ. ಎಷ್ಟೇ ಜನ್ಮ ಹುಟ್ಟಿ ಬಂದರು ತಾಯಿಯ ಋಣ ತೀರಿಸಲಾಗದು. ಜಗತ್ತಿನಲ್ಲಿ ತಾಯಿಯ ಮಡಿಲಿಗಿಂತ ಪವಿತ್ರ ಸ್ಥಳವಿಲ್ಲ. ತಾಯಿಯ ಕೈಗಳ ಸ್ಪರ್ಶಕ್ಕಿಂತ ಬೇರೆ ಸಂತೋಷವಿಲ್ಲ. ತಾಯಿಯನ್ನು ಪ್ರೀತಿಸೋಣ. ಪೂಜಿಸೋಣ. ತಾಯಿಯ ಪ್ರೀತಿಯನ್ನು ಬೇರೆಯವರಿಗೆ ಹೋಲಿಸುವುದು ಸೂರ್ಯನ ಮುಂದೆ ದೀಪವನ್ನು ಬೆಳಗಿಸಿದಂತೆ. ತಾಯಿಯ ಪ್ರೀತಿಗೆ ಆಕಾಶದಷ್ಟು ಮಿತಿಯುಂಟೆ ? ತಾಯಿಯ ಕರ್ತವ್ಯಕ್ಕೆ ದೇವರೇ ಕೈಮುಗಿದಿದ್ದು ಗೊತ್ತೇ? ಎಲ್ಲಾ ಸಂಬಂಧಗಳಿಗೂ ಕೇಂದ್ರ ಬಿಂದು ತಾಯಿ. "ತಾಯಿ" ಎನ್ನುವ ಎರಡು ಅಕ್ಷರಕ್ಕೆ ಸಾಕ್ಷಿಯಾದವಳು. ತಾಯಿಯ ಬಗ್ಗೆ ಎಷ್ಟೇ ವರ್ಣನೆ ಮಾಡಿದರೂ ಸಾಲದು.

– ಮುತ್ತು ಯ. ವಡ್ಡರ, ಶಿಕ್ಷಕರು
ಬಾಗಲಕೋಟ., ಮೊ:9845568484

**ಕವಿ ಮನಸು**

## ನತ್ತು



ಏನ್ ಚೆಂದ ಐತೆ
ನಿನ್ನ ಮೂಗಿನ ನತ್ತ
ಎನ್ನ ಮನಸು ಎಲ್ಲ
ನತ್ತಿನ ಮ್ಯಾಲ ಐತ

ಹಗಲಿನ ಬೆಳಕು ಎಲ್ಲ
ನಿನ್ನ ಕಣ್ಣಿನಲ್ಲಿ ಐತ
ಅದೇ ಬೆಳಕಿನಲ್ಲಿ
ಎನ್ನ ಜೀವ ತುಂಬಿಕೊಂಡೈತಾ

ಕರಿ ಬಣ್ಣ ಕಣ್ಣ ಮೇಲ
ಏರಿ ಚಂದ ಕುಂತೈತ
ವದನವು ಫಳ ಫಳ
ಹೊಳೆದು ಮಿಂಚಕ ಹತ್ತೈತ

ನಿನ್ನ ಕಣ್ಣ ತುಂಬಾ ಆಸೆ
ಒತ್ತಿ ಒತ್ತಿ ಕಾಣತೈತ
ಒಲವ ತುಂಬಿ ಸೇರು
ಬಾರೋ ಅನ್ನಾಕ ಹತ್ತೈತ

ನಿನ್ನ ಮುಗ್ಧ ಮುಖವು ಎನ್ನ
ಕೂಗಿ ಕೂಗಿ ಕರಿಲಾಕ ಹತ್ತೈತ
ಎಷ್ಟು ಮರಿಬೇಕು ಅಂದರೂ
ಮನಸ ಕಾಡಾಕ್ ಹತ್ತೈತ

– ಕೆ ಎಂ ಬಸವರಾಜ ಹೊಸಪೇಟೆ

# ಒಂದು ಮತ ಪ್ರಜಾಪ್ರಭುತ್ವದ ಹಿತ

ನನಗೆ ಹದಿನೆಂಟು ತುಂಬುವುದು ಕಾಯುತ್ತಿದ್ದೆ , ಒಂದು ಹರೆಯ ಹೋಗಿ ವಯಸ್ಕ ಪಟ್ಟ ಸಿಗುವುದೆಂಬ ಕಾರಣಕ್ಕೆ.ಮತ್ತೊಂದು ನಾವು ಕೂಡ ಮತದಾನ ಮಾಡಬೇಕು ಎಂಬ ಅಧ್ಯಮ ಉತ್ಸಾಹ. ಮೊದಲ ಬಾರಿಗೆ ನಾನು ಓಟು ಮಾಡಿದಾಗ, ನಾವೆಲ್ಲ ಗೆಳೆಯರು ಒಮ್ಮೆಗೆ ಸೇರಿ ಮತದಾನ ಮಾಡಿದ್ದೇವು.ಆಗಿನ್ನು ಆ?ಯಂಡ್ರಾಯ್ಡ್ ಮೊಬೈಲ್ ಬಂದಿರಲಿಲ್ಲ. ತದನಂತರ ವಿಧಾನಸಭೆ,ಲೋಕಸಭೆ.ಗ್ರಾಮ ಪಂಚಾಯತ್ ಚುನವಣೆಗಳು ಜರುಗಿದಾಗ ಓಟು ಹಾಕುವ ಕಾಯಕ ಮುಂದುವರಿಸಿದ್ದೇನೆ. ಈಗಲೂ ಊರಿನ ಚುನಾವಣೆಗೆ ಮತ ಹಾಕಲು ಹೋದಾಗ ಗೆಳೆಯರೆಲ್ಲ ಸೇರಿ ಮತದಾನ ಮಾಡಿ ,ಒಂದು ಪೋಟೋ ತೆಗೆಸಿಕೊಂಡು ಚುನಾವಣೆ ಪ್ರಜಾಪ್ರಭುತ್ವದ ಹಬ್ಬ ಎನ್ನುವುದನ್ನ ಸಾಬೀತು ಮಾಡುತ್ತೇವೆ.

ನನಗೆ ತಿಳುವಳಿಕೆ ಬಂದಾಗಿಂದ ನೋಡುತ್ತಿರುವೆ,ಚುನಾವಣೆ ಬಂದಾಗ ನನ್ನ ಊರಿನ ಚಿತ್ರಣ ಬದಲಾಗುತ್ತೆ .ಕಾರಣ ಊರಿನ ಹಬ್ಬ ಹರಿದಿನಗಳನ್ನು ಒಟ್ಟಾಗಿ ಕೂಡಿ ಆಚರಿಸುವ ಮುಖಂಡರು ಚುನಾವಣೆ ಬಂದಾಗ ಎರಡು ಬಣಗಳಾಗಿ ಬೇರ್ಪಟ್ಟಿರುತ್ತದವು. ಹಲವರು ಬೇರೆ ಬೇರೆ ಪಕ್ಷಗಳ ಮುಖಂಡರಾಗಿ ಗುರುತಿಸಿಕೊಂಡು ,ತಮ್ಮ ಪಕ್ಷಕ್ಕೆ ಹೆಚ್ಚಿನ ಓಟು ಗಿಟ್ಟಿಸಿಕೊಳ್ಳುತ್ತವೆ ಎಂದು ಅವರ ಪಕ್ಷದ ಸಭೆಗಳಲ್ಲಿ ಹೇಳಿರುತ್ತಾರೆ.ಈ ಕಾರಣದಿಂದ ಎದುರಿಗೆ ಬಂದಾವ ತಮ್ಮ ಪಕ್ಷದವನಾಗಿದ್ದರೆ ,ಆತನ ಆರೋಗ್ಯದಿಂದ ಎಲ್ಲವೂ ವಿಚಾರಿಸಿ ಆತನನ್ನು ಬಿಳ್ಕೊಡುತ್ತಾರೆ.ಅವನು ಏನಾದರು ವಿರೋದ ಪಕ್ಷದ ಬಣದವನಾಗಿದ್ದರೆ ನೋಡಿದರು ನೋಡದಂತೆ ಹೋಗುತ್ತಾರೆ. ಇದೆಲ್ಲ ಚುನಾವಣೆ ಮುಗಿಯುತನಕವಷ್ಟೆ , ಸದಾ ಊರು ಸಂಬಂಧಗಳನ್ನು ಪೋಣಿಸಿಕೊಂಡ ಹನುಮಂತಪ್ಪ ದೇವರಿಗೆ ಹಾಕುವ ಮಲ್ಲಿಗೆ ಹಾರದಂತೆ ಇರುತ್ತದೆ.ಈ ದಿನಗಳಲ್ಲಿ ಮಾತ್ರ ಹಾರವೂ ಕತ್ತರಿಸಿ ಎರಡು ಭಾಗವಾಗಿರುತ್ತದೆ.ಅಳಿಯ,ಮಾವ,ಅಣ್ಣ ಎಂದು ಕರೆಯುವವ ಹಳ್ಳಿಯ ಸಾಂಪ್ರದಾಯ ಹೋಗಿ ಆತ ಈತ ಎನ್ನುವ ಮಟ್ಟಿಗೆ ವಿರೋದ ಬಂದಿರುತ್ತದೆ.ಕೆಲವು ಅತಿರೇಕದ ಜಗಳಗಳು ನಡೆದು ಮನಸ್ತಾಪಗಳು ಆದಾಗ, ಊರಿನ ಹಿರೀಕರು ರಾಜಕೀಯಕ್ಕೆ ಯಾಕೆ ಜಗಳ ಆಡ್ತಿರಾ ,ನೀವು ಇಲ್ಲಿ ಜಗಳ ಆಡ್ತಿರಾ, ಅವರು ಮೇಲಿರುವರೆಲ್ಲ ಒಂದೇ ,ಚುನಾವಣೆ ಮುಗಿದ ಮೇಲೆ ವಿಧಾನಸೌದದಲ್ಲಿ ಒಂದೇ ಟೇಬಲ್ ಮೇಲೆ ಊಟ ಮಾಡ್ತಾರೆ ಅಂತಾ ಹೇಳುತ್ತಿದ್ದರು.ಆಗ ಜಗಳ ತಣ್ಣಗಾಗಿದುಂಟು

ಊರುಗಳಿಂದ ಹೊರಗಡೆ ಹೋದ ಮಂದಿ ಊರಿನ ಹಬ್ಬ ತೇರು ಜಾತ್ರೆಯ ಜೊತೆಗೆ ಚುನಾವಣೆ ಇದ್ದಾಗಲು ತಪ್ಪದೆ ಬರುತ್ತಾರೆ. ಆದರೆ ಅದು ಚುನಾವಣೆ ಕಾವು ಎಷ್ಟು ಜೋರು ಇದೆ ಎಂಬುದರ ಮೇಲೆ ನಿರ್ಣವಾಗುತ್ತದೆ. ಚುನಾವಣೆ ಕೂಡ ಒಂದು ರೀತಿ ಜನರನ್ನು ಬೆಸೆಯುತ್ತದೆ.ಚುನಾವಣೆಯ






**ಕೊಟ್ರೇಶ ಅಕ್ಕಿ**
ಉಪನಾಯಕನಹಳ್ಳಿ
ಬಿಡಿಸಿಸಿ ಬ್ಯಾಂಕ್ ಉದ್ಯೋಗಿ

ಉಸ್ತುವಾರಿ ವಹಿಸಿದ ಮುಖಂಡರು ದೂರದ ಪೇಟೆಗೆ ದುಡಿಯಲು ಹೋದವರನ್ನ ಪೋನಾ ನಂಬರ್ ಪತ್ತೆ ಹಚ್ಚಿ ಕರೆ ಮಾಡಿ. ಮರಿಬ್ಯಾಡ ತಮ್ಮ.ಬರಬೇಕು ತಂಗಿ ,ಮುಂದಿನ ಸಲ ಸರಕಾರದು ಮನೆ ನಿಮಗ ಮಾಡಿಸಿ ಕೊಡ್ತಾವಿ.ಈಗ ಓಟ ಹಾಕೊಕೆ ಬಂದ್ರೆ ಬಸ್ ಚಾರ್ಜ ಕೊಡ್ತಾವಿ ಅಂತಾ ಮತದಾರರನ್ನು ಓಲೈಸಿ ಕರಿಸಿಕೊಳ್ಳತ್ತಿದ್ದರು. ಚುನಾವಣೆ ನಿಮಿತ್ತ ಓಟು ಹಾಕಲು ಬಂದವರು ಊರೆಲ್ಲ ತಿರುಗಾಡಿ ಊರಿನ ಹಳೆಯ ನೆನಪುಗಳನ್ನು ಮೆಲುಕು ಹಾಕಿ ಇದ್ದೂರಾಗ ಇರೋ ಸುಖ ಬ್ಯಾರೆಕಡಿ ಸಿಗಲ್ಲ,ಏನೋ ದುಡಿಮಿ ಐತಿ ನಾಲ್ಕು ಕಾಸ ಸಿಗತೈತಿ ಅಂತಾ ಊರ ಬಿಟ್ಟು ಹೋಗವಿ ಅನ್ನೋ ಮಾತು ಆಡ್ತ ಇದ್ದರು,

ಊರಿನ ಕೆಲವರು ಹೇಳುವಂತೆ 90 ರ ದಶಕದಲ್ಲಿ ಚುನಾವಣೆ ನಡೆಯುವಾಗ ,ಊರಿನ ದೊಡ್ಡ ಹೋಟೆಲ್ ನಲ್ಲಿ ಟಿಪನ್ನಲ್ಲಿ ಒಂದು ಚೀಲ ಮಂಡಕ್ಕಿ ಒಗ್ಗರಣೆ ಮಿರ್ಚಿ ಹಾಕಿಸಿ ಬಿಡ್ತಿದ್ದಂತೆ.ಓಟು ಹಾಕುವ ಮುನ್ನ ಒಗ್ಗರಣೆ ತಿಂದು ಮತ ಹಾಕಲಿ ಅಂತಾ, ಆದರೆ ಈಗ ಓಟಿಗೆ ಎಷ್ಟು ನೋಟು ಕೊಡುವವರು ಎನ್ನುವ ಲೆಕ್ಕಚಾರ ಮಾಡಿ, ಪ್ರಜೆಗಳು ಓಟು ಮಾಡುವ ಹಂತಕ್ಕೆ ತಲುಪಿದ್ದಾರೆ,ಯಾರು ಬಂದರು ನಾವು ದುಡಿಯೋದು ತಪ್ಪಲ್ಲ,ಎಲ್ಲರು ಅವರೆ ಎಂದು ಮಾತಾಡಿ, ಮತ ಮಾರಿಕೊಂಡು ಬಿಡ್ತಾರೆ, ಈ ಕ್ಷಣ ಬಾಬಾ ಸಾಹೇಬ್ ಅಂಬೇಡ್ಕರ ಮತದಾನದ ಕುರಿತು ಆಡಿದ ಮಾತು ನೆನಪಾಗುತ್ತಿದೆ "ಮತದಾನ ಎಂಬುದು ಮನೆ ಮಗಳಿದ್ದಂತೆ ,ಅದನ್ನು ಹಣಕ್ಕಾಗಿ ಮಾರಿಕೊಳ್ಳಬೇಡಿ"

ಕೆಲವೊಬ್ಬರಿಗೆ, ಮೊನ್ನೆ ಇನ್ನ ಓಟು ಹಾಕಿವಿ ಇದು ಯಾವ ಎಲೆಕ್ಷನ ಬಂದಿದೆ ಅನ್ನೋ ಪ್ರಶ್ನೆ? .ರಾಜಕಾರಣದ ಹುಚ್ಚಿರುವ .ದಿನ ಬೆಳ್ಳಿಗೆ ಪೇಪರಗಳನ್ನು ಪುಟ ಬಿಡದೆ ಓದುವ ಊರಿನ ಕೆಲ ಜಾಣರು ಇದ್ದರು. ಅವರು ಮೊನ್ನೆ ಆಗಿದ್ದು ವಿಧಾನಸಭೆದು.ಈಗ ಆಗ್ತ ಇರೋದು ಲೋಕಸಭೆದು ಮುಂದೆ ಬರೋದು ಗ್ರಾಮಪಂಚಾಯಿತಿದು ಅಂತಾ ಬಿಡಿಸಿ ಹೇಳ್ತ ಇದ್ದರು. ಇ ರೀತಿ ತಿಳಿದುಕೊಂಡು ಬುದ್ದಿ ಹೇಳುವವರು ಊರಿನ ಎರಡು ಪಕ್ಷಗಳಿಂದ ಅಂತರ ಕಾಯ್ದುಕೊಂಡವರು ಎನ್ನಬಹುದು.ಚುನಾವಣೆ ಕುರಿತು ತಿಳಿಸಿಕೊಡುವ ಆಯೋಗದ ಕೆಲಸವನ್ನ ಮಾಡುತ್ತಿದ್ದರು. ಒಮ್ಮೆ ಗ್ರಾಮ ಪಂಚಾಯಿತಿ ಚುನಾವಣೆ ನಡೆದಿತ್ತು ಊರಲ್ಲಿ ನಾನು ಮತಹಾಕುವ ವಾರ್ಡನದ್ದು ಜಿದ್ದಾಜಿದ್ದಿ ಸ್ಪರ್ದೆ ನಡೆದಿತ್ತು. ಬ್ಯಾಂಕಿನ ನೌಕರಿ ನಿಮಿತ್ತ ಅನ್ಯ ಊರಿನಲ್ಲಿದ್ದ ನಾನು ಮತದಾನದ ಅವಕಾಶ ಕಳೆದುಕೊಂಡೆ.ರಜೆ ಹಾಕಲು ಅವಕಾಶವಿದ್ದರು ,ಮತದಾನ ತಪ್ಪಿಸಿಕೊಂಡೆ.ವಾರದೊಳಗೆ ಚುನಾವಣಾ ಫಲಿತಾಂಶ ಬಂದಾಗ ಬೆರಳಣಿಯ ಓಟಿನಿಂದ ಅವರು ಸೋತಿದ್ದರು, ಆಗ ಗೆಳೆಯರು ನಿಮ್ಮಂತವರು ಓಟು ಹಾಕೋಕೆ ಬರದೆ ಸೋತುಬಿಟ್ಟರು ಅವರು ಎಂಬ ಮಾತನ್ನ ನನಗೆ ಪದೇ ಪದೇ ಹೇಳುತ್ತಿದ್ದರು, ಅಂದಿನಿಂದ ಯಾವುದೇ ಸಮಯದಲ್ಲೂ ಕೂಡ ಮತದಾನದ ಅವಕಾಶ ಕಳೆದುಕೊಳ್ಳುವುದಿಲ್ಲ.ನನ್ನ ಒಂದು ಮತ ಏನು ಮಾಡಿತ್ತೆಂಅವರೆ ತಾತ್ಸಾರ ಮಾಡುವುದಿಲ್ಲ ,ನಿಮ್ಮ ಒಂದು ಮತ ನಿಮ್ಮ ಊರು,ತಾಲೂಕು,ಜಿಲ್ಲೆ ರಾಜ್ಯ,ದೇಶವನ್ನು ಬದಲಾಯಿಸುವ ಶಕ್ತಿ ಹೊಂದಿದೆ. ಹನಿ ಹನಿಗೂಡಿದರೆ ಹಳ್ಳ ,ತೆನೆ ತೆನೆಕೂಡಿದರೆ ಬಳ್ಳ ಎಂಬ ಗಾದೆಯ ಸಾರವನ್ನು ಅರಿಯುತ್ತ, ನಿಮ್ಮ ಒಂದು ಮತ ಪ್ರಜಾಪ್ರಭುತ್ವಕ್ಕೆ ಹಿತ ಎಂದು ಭಾವಿಸಿ...ತಪ್ಪದೇ ಮತದಾನ ಮಾಡೋಣ.

## ಮೈಸೂರು ಚಾಮರಾಜನಗರ ಜಿಲ್ಲೆಗಳಲ್ಲಿ ರಜೆ ಘೋಷಣೆ :ಸಿಎಂ

**ಮೈಸೂರು:** ದಿವಂಗತ ಶ್ರೀನಿವಾಸ್ ಪ್ರಸಾದ್ ರವರ ನಿಧನಕ್ಕೆ ಗೌರವ ಸೂಚಕವಾಗಿ ಚಾಮರಾಜನಗರ ಜಿಲ್ಲೆಗಳಲ್ಲಿ ರಜೆ ಘೋಷಣೆ ಮಾಡಿದ್ದು, ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಅವರು ಇಂದು ಚಾಮರಾಜನಗರದ ಹಾಲಿ ಸಂಸದರಾಗಿದ್ದ ದಿವಂಗತ ಶ್ರೀನಿವಾಸ್ ಪ್ರಸಾದ್ ರವರ ಪ್ರಾರ್ಥಿವ ಶರೀರಕ್ಕೆ ಮಾಲಾರ್ಪಣೆ ಮಾಡಿ ಅವರ ಕುಟುಂಬಕ್ಕೆ ಸಾಂತ್ವನ ಹೇಳಿದ ನಂತರ ಮಾಧ್ಯಮ ದವರೊಂದಿಗೆ ಮಾತನಾಡಿದರು. 15 ದಿನಗಳ ಹಿಂದೆ ಭೇಟಿಯಾಗಿದ್ದಾಗ ರಾಜಕೀಯ ಮಾತನಾಡಿದೆವು. ರಾಜಕೀಯದಲ್ಲಿ ಸಂತೋಷದ ಕ್ಷಣ ಬಹಳ ಕಡಿಮೆ. ಹೋರಾಟ ಮಾಡುವಾಗ ಸಂತೋಷದ ಕ್ಷಣಗಳು ಕಡಿಮೆ. ಬಹಳ ವರ್ಷ ಗಳ ನಂತರ ಭೇಟಿಯಾಗಿದ್ದ ಕಾರಣ ಸಂತೋಷವಾಗಿದೆ ಎಂದು ಹೇಳಿರಬಹುದು ಎಂದು ಮುಖ್ಯಮಂತ್ರಿಗಳು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಜೊತೆಯಲ್ಲಿಯೇ ರಾಜಕಾರಣಮಾಡಿದವರು,ಮಂತ್ರಿಮಂಡಲದಲ್ಲಿ ಸಚಿವರಾ ಗಿದ್ದರು. ಜನತಾ ಪಕ್ಷ ಹಾಗೂ ಕಾಂಗ್ರೆಸ್ ನಲ್ಲಿ ಒಟ್ಟಿಗಿದ್ದವರನ್ನು ಕಳೆದುಕೊಂಡಾಗ ಬಹಳ ದುಃಖವಾಗುತ್ತದೆ ಎಂದರು.

## ಓತ್ ಫಾರ್ ಓಟ್ ಎಂಬ ಉತ್ಸುಕತೆಯ ಸಂಚಲನವು ಸೃಷ್ಟಿಯಾಗಬೇಕಿದೆ

ಊರು ಕೇರಿ ಮನೆ ಮತ ಯಾವುದೇ ಇರಲಿ ಎಲ್ಲಾ ಭೇದಗಳನ್ನು ಮರೆತು ಸರತಿ ಸಾಲುಗಳಲ್ಲಿ ನಿಲ್ಲಿಸಬಲ್ಲ ಸಂಭ್ರಮದ ಹಬ್ಬವೂ ಇದೇ ಹೌದು. ಬೆಂಗಳೂರಿನಂತ ದುಬಾರಿ ಊರಿನಲ್ಲಿ ಅಕ್ಕಪಕ್ಕದ ಮನೆಯವರ ಚಹರೆಗಳನ್ನು ನೋಡಿ ವರ್ಷಗಳೇ ಕಳೆದಿರುತ್ತದೆ, ಅಂತಹ ಸಂದರ್ಭದಲ್ಲಿ ಮುಖಾಮುಖಿಯಾಗಿ ಸೇರಿ ಮತ ಚಲಾಯಿಸಿ ಒಂದು ಚಹಾನೋ ಗುಟುಕಿನ ಕಾಫಿನೋ ಆಸ್ವಾದಿಸುವುದು ಒಂದು ಸಂಭ್ರಮವೇ ಹೌದು. ಅದೇ ಈ ಮುಂಬೈ ನಗರಿಯನ್ನು ಓವರ್ ಟೇಕ್ ಮಾಡುತ್ತಿರುವ ಬೆಂಗಳೂರು ನಗರ ಹಾಗೂ ಇಲ್ಲಿನ ಕೆಲ ಪ್ರಜ್ಞಾವಂತರೆನ್ನಿಸಿಕೊಂಡವರಿಗೆ ಈ ದಿವಸವು ಕೆಲವೊಮ್ಮೆ ದಿ ಮಿಸ್ಸಿಂಗ್ ಡೇ ಎಂದು ಪರಿಗಣನೆಗೆ ಬಂದುಬಿಡುತ್ತದೆ. ಕಾರಣ ಮೆಕನೈಸ್ಡ್ ಲೈಫ್ ಸ್ಟೈಲು... ದಿನಗಟ್ಟಲೇ ಮೈಕ್ರೋಸಾಫ್ಟ್ ಟೀಮ್ಸಿನಲ್ಲಿ ಕಂಪಸಿ ಬರುವ ಅದೊಂದು ಎಚ್ಚರಿಕೆಯ ಕರೆಗೆ ನಿದ್ರೆ ಜಾರಿರುವ ವರನ್ನು ಮುಖಕ್ಕೆ ನೀರೆರಚಿ ಎಬ್ಬಿಸಿದಂತಿರುತ್ತದೆ . ಯಾವಾಗ ನೋಡಿದರು ರಿಸರ್ವ್ಸಡ್ ಲೈಫು, ಅಕ್ಕಪಕ್ಕದ ಕಬರ್ರುಗಳು ಬೇಡವೇ ಬೇಡ ವೀಕೆಂಡಿನಲ್ಲಿ ಅರ್ಥಾತ್ ಶುಕ್ರವಾರದ ರಾತ್ರಿಯಲ್ಲೇ ಕಳೆದುಹೋಗಿ ಮಂಡೇ ಬೆಳಿಗ್ಗೆ ಕಾಣಬಲ್ಲ ಜನರ ನಡುವೆ ಈ ಜೀವನದ ಪಯಣವು ಸಾಗಬೇಕಾದಲ್ಲಿ.

ಈ ಪವಿತ್ರವಾದ ಪ್ರಜಾಪ್ರಭುತ್ವದ ಆದ್ಯ ಕರ್ತವ್ಯವು ಅರಿವಿಗೆ ಬಾರದೆ ಆವಿಯಾಗಿ ಬಿಡುತ್ತದೆ. ಇದು ಮಹಾನ್ ವಿಪರ್ಯಾಸ ದುರಂತವೂ ಹೌದು, ನಾಗರೀಕ ಎನ್ನಿಸಿಕೊಂಡ ಮೇಲೆ ಅವನು ಓಟ್ ಹಾಕದೆ ಮೊಬ್ಬಾಗಿ ಎಲ್ಲೋ ಮೋಜು ಮಸ್ತಿಮಾಡಿದರೇನು ಬಂದು . ಇಂತಹ ನೆಗ್ಲಿಜೆನ್ಸಿನ ಆರಾಧಕರಿಗೆ ವೋಟ್ ಮಾಡುವುದಕ್ಕೆ ಏನ್ ದಾಡಿ ಎನ್ನುವ ಪ್ರಶ್ನೆಗಳು ಸಹಜವಾಗಿ ಉದ್ಭವಿಸದೇ ಇರದು.

ಓಟನ್ನು ಕಡ್ಡಾಯ ಮಾಡಿಬಿಟ್ಟರಂತೂ ಇನ್ನೂ ಉತ್ತಮ ಅಂತಹ ಪ್ರಯೋಗಗಳು ನಡೆಯಲಿ. ಓತ್ ಫಾರ್ ಓಟ್ ಎನ್ನುವ ಪ್ರಸಂಗಗಳು ಬರೋದೇ ಇಲ್ಲ, ಅದರ ಗೋಜೇ ಬೇಡ. ಮತದಾನದ ಅರಿವು ಅದರ ಪರಿಣಾಮವು ಶ್ರೀ ಸಾಮ್ಯಾನರಿಗೆ ನಾಟದೇ ಹೋದರೆ ಹೇಗದು. ನಾವು ಆರಿಸುವ ನಾಯಕನನ್ನು ರಿವ್ಯೂ ಮಾಡಬೇಕಾಗಿದೆ, ಅವರ ರಿಪೋರ್ಟ್ ಕಾರ್ಡನ್ನು ನಿರ್ಭಿಡೆಯಿಂದ ಕೇಳಬೇಕಿದೆ ಅಲ್ಲವೇ !? ಅವರ ಐದು ವರ್ಷದ ಸಾಧನೆಯೇನು ಎಂಬುದೆಲ್ಲಾ ಪ್ರಶ್ನಿಸಬೇಕಾಗಿದೆ.... ಕುವೆಂಪುರವರ ದಿವ್ಯವಾದ ಸಾಲುಗಳಾದ "ಸತ್ತಂತಿವರನು ಬಡಿದೆಚ್ಚರಿಸು" ಎನ್ನುವ ನುಡಿಯು ಸಕಾಲಿಕ .ಯಾರು ಓಟ್ ಮಾಡಲ್ಲ ಅವರಿಗೆ ಮಾತ್ರ ಅನ್ವಯವೆನ್ನಿಕೊಳ್ಳಿ.

ಈ ಶುದ್ಧ ಸೋಂಬೇರಿತನದ ಪರಮಾವಧಿಯಿಂದ ಆಚೆಗೆ ಬರೋದು ಹೇಗೆ, ವೋಟ್ ಮಾಡದೇ ಊರೆಲ್ಲಾ ಸುತ್ತಿ ಏನೋ ಎಗ್ಗುಸಗ್ಗಿಲ್ಲದೆ ಬದುಕಿದರೇನು. ನಮಗೆ ಓಟ್ ಮಾಡುವುದು ಶಕ್ತಿಯ ಸಂಚಯವೇ ಆಗಿದೆ, ತಾತ್ಸರವನ್ನು ಮಾಡದೇ ಉತ್ಸಾಹಭರಿತವಾಗಿ ಯೋಗ್ಯ ನಾಯಕನ ಆಯ್ಕೆಯು ನಿಷ್ಠೆಯಿಂದ ನಡೆಯಬೇಕಿದೆ... !?

– ಆದಿತ್ಯ .ಜಿ.ಮೈಸೂರು

## ಮೇ 15ರವರೆಗೆ ದ್ವಿತಿಯ ಪಿಯುಸಿ ಪೂರಕ ಪರೀಕ್ಷೆ: ನಿಷೇಧಾಜ್ಞೆ ಜಾರಿ

■ ಹಂಪಿ ಟೈಮ್ಸ್ ಕೊಪ್ಪಳ
ಜಿಲ್ಲೆಯಲ್ಲಿ ಏಪ್ರಿಲ್ 29ರಿಂದ ಮೇ 15ರವರೆಗೆ (ಮೇ 05 ರಿಂದ 08 ರವರೆಗೆ ಈ ನಾಲ್ಕು ದಿನಗಳು ಮತ್ತು ಸರ್ಕಾರಿ ರಜಾ ದಿನಗಳು ಹಾಗೂ ಭಾನುವಾರಗಳನ್ನು ಹೊರತುಪಡಿಸಿ) ನಡೆಯಲಿರುವ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗಳು ಸುಗಮ ಹಾಗೂ ಶಾಂತಿಯುತವಾಗಿ ನಡೆಯುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳ ಸುತ್ತಲೂ 200ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗಳು ನಿಗದಿತ ದಿನಾಂಕದ ಬೆಳಿಗ್ಗೆ 10ರಿಂದ ಮಧ್ಯಾಹ್ನ 1:30 ಗಂಟೆಯವರೆಗೆ ಕೊಪ್ಪಳದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಗಂಗಾವತಿಯ ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಮತ್ತು ಸರಕಾರಿ ಎಸ್.ಎಂ.ಎನ್.ಎಂ ಬಾಲಕಿಯರ ಪದವಿ ಪೂರ್ವ ಕಾಲೇಜು, ಕುಷ್ಟಗಿಯ ಸರಕಾರಿ ಪದವಿ ಪೂರ್ವ ಕಾಲೇಜು ಮತ್ತು ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಹಾಗೂ ಯಲಬುರ್ಗಾದ ಸರಕಾರಿ ಪದವಿ ಪೂರ್ವ ಕಾಲೇಜು ಸೇರಿದಂತೆ ಈ 7 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ರೀತಿಯ ಅಕ್ರಮ, ಅವ್ಯವಹಾರ ನಡೆಯದಂತೆ ತಡೆಗಟ್ಟಲು ಸಿ.ಆರ್.ಪಿ.ಸಿ 1973 ಕಲಂ 144ರನ್ವಯ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ಅಂತರದ ಪ್ರದೇಶದಲ್ಲಿ ವಿವಿಧ ಷರತ್ತಿಗೆ ಒಳಪಟ್ಟು ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

ನಿಷೇಧಿತ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್.ಟಿ.ಡಿ, ಮೊಬೈಲ್ ಪೇಜರ್, ಜಿರಾಕ್ಸ್, ಟೈಪಿಂಗ್ ಮುಂತಾದವುಗಳನ್ನು ನಿಷೇಧಿಸಿದೆ. ಪರೀಕ್ಷೆಯಲ್ಲಿ ಪ್ರವೇಶ ಪತ್ರ ಹೊಂದಿದ ವಿಧ್ಯಾರ್ಥಿಗಳು ಹಾಗೂ ನಿಯೋಜಿತ ಶಿಕ್ಷಕರನ್ನು, ಜಾಗೃತ ದಳದವರನ್ನು ಹೊರತುಪಡಿಸಿ ಇನ್ನೂಳಿದವರಿಗೆ ಪರವಾನಿಗೆ ಇಲ್ಲದೇ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದನ್ನು ನಿಷೇಧಿಸಲಾಗಿದೆ. 200 ಮೀಟರ್ ಪರೀಕ್ಷಾ ಕೇಂದ್ರದ ಸುತ್ತಲೂ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವದನ್ನು ನಿಷೇಧಿಸಿದೆ. ಈ ಆದೇಶವು ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ವಯವಾಗುವದಿಲ್ಲ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ಮತದಾನ ನಿಮ್ಮ ಹಕ್ಕು ತಪ್ಪದೇ ಚಲಾಯಿಸಿ


### ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ ಹೇಳಿಕೆ | ಎಪಿಎಂಸಿ ಪ್ರದೇಶದಲ್ಲಿ ಮತದಾನ ಜಾಗೃತಿ

■ ಹಂಪಿ ಟೈಮ್ಸ್ ಬಳ್ಳಾರಿ
ಮತದಾನ ಆದ್ಯ ನಾಗರಿಕರ ಕರ್ತವ್ಯವಾಗಿದ್ದು, ಅರ್ಹ ಮತದಾರರು ತಪ್ಪದೇ ಮತ ಚಲಾವಣೆ ಮಾಡಬೇಕು ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಇವರ ಆಶ್ರಯದಲ್ಲಿ ನಗರದ ಎಪಿಎಂಸಿ ಮಾರುಕಟ್ಟೆ ಪ್ರದೇಶದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಮತದಾನ ಜಾಗೃತಿ ಅಭಿಯಾನದಲ್ಲಿ ಅವರು ಮಾತನಾಡಿದರು.

ಮೇ 07 ರಂದು ನಡೆಯುವ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರತಿಯೊಬ್ಬ ನಾಗರಿಕರು ಮತ ಚಲಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು ಎಂದರು.

ಬಳ್ಳಾರಿ ತಾಲ್ಲೂಕು ಸ್ವೀಪ್ ನೋಡೆಲ್ ಅಧಿಕಾರಿ ಹಾಗೂ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಮಡಗಿನ ಚನ್ನಬಸಪ್ಪ ಮಾತನಾಡಿ, ಯಾವುದೇ ಆಸೆ-ಅಮೀಷಗಳಿಗೆ ಒಳಗಾಗದೇ ಮೇ 07 ರಂದು ಪ್ರತಿಯೊಬ್ಬರು ಮತ ಚಲಾಯಿಸಬೇಕು. ಎಂದರು.




ಈ ಸಂದರ್ಭದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಎಂಪಿಎಂಸಿ ಮಾರುಕಟ್ಟೆಯ ಅಧಿಕಾರಿ, ಸಿಬ್ಬಂದಿ ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

### ಸುತ್ತ ಮುತ್ತ ಕುಂದು-ಕೊರತೆ

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ? ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು ಹಂಪಿ ಟೈಮ್ಸ್ ದಿನಪತ್ರಿಕೆ 9448633038 ವಾಟ್ಸಪ್ ನಂಬರ್ ಗೆ ಕಳುಹಿಸಿ.

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.



ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ
Organic Coconut & Banana, Moringa oleifera Available in best Price
98458 65204 ಮೃತ್ಯುಂಜಯನಗರ, ಹೊಸಪೇಟೆ

# ಮತದಾನ ಮಾಡಿ ಪ್ರಜಾಪ್ರಭುತ್ವ ಹಬ್ಬ ಆಚರಿಸಿ

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**30–04–2024 – ಮಂಗಳವಾರ**

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತಾಷಾಡ |
| ಯೋಗ | : ಸಾಧ್ಯ |
| ಕರಣ | : ವಾಣಿಜ |
| ಸೂರ್ಯೋದಯ | : 05:55:30 |
| ಸೂರ್ಯಾಸ್ತ | : 18:53:00 |
| ರಾಹು | : 15:39–17:16 |
| ಯಮಘಂಡ | : 09:10–10:47 |
| ಗುಳಿಕ | : 12:24–14:01 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 29–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.22 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 260 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.666 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1575.97 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 251 ಕ್ಯುಸೆಕ್ |
| ಸಾಮರ್ಥ್ಯ | 2.813 ಟಿಎಂಸಿ |

## ಸದೃಢ ಹಾಗೂ ಬಲಿಷ್ಠ ದೇಶ ಕಟ್ಟಲು ಮತದಾನ ಮಾಡಿ:

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರತಿಯೊಬ್ಬರೂ ತಮ್ಮ ಮತದ ಮೌಲ್ಯ ಅರಿತು ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಂಡು ಮತದಾನ ಮಾಡುವ ಮೂಲಕ ಸದೃಢ ಹಾಗೂ ಬಲಿಷ್ಠ ದೇಶ ಕಟ್ಟುವಲ್ಲಿ ಕೈಜೋಡಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಕರೆ ನೀಡಿದರು. ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಮತದಾನ ಜಾಗೃತಿ ಅಂಗವಾಗಿ 'ನಮ್ಮ ನಡೆ ಮತಗಟ್ಟೆ ಕಡೆ' ಕಾರ್ಯಕ್ರಮದಡಿ ಭಾನುವಾರದಂದು ನಗರದ ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಪ್ರಥಮ ದರ್ಜೆಯ ಕಾಲೇಜು ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಮತದಾನದಲ್ಲಿ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಮೂಲಕ ಮತದಾನ ಪ್ರಮಾಣವನ್ನು ಹೆಚ್ಚಿಸುವ ಗುರಿಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ 'ನಮ್ಮ ನಡೆ ಮತಗಟ್ಟೆಯ ಕಡೆ' ವಿನೂತನ ಕಾರ್ಯಕ್ರಮವಾಗಿದೆ ಎಂದರು.

# ದೇಶ ಸುಭಿಕ್ಷೆಯಾಗಿರಲು ಬಿಜೆಪಿ ಆಡಳಿತವೇ ಸಾಕ್ಷಿ : ಪ್ರಧಾನಿ ಮೋದಿ



> ನನ್ನ ಹೆಸರು ಇತಿಹಾಸದ ಪುಟದಲ್ಲಿ ದಾಖಲಾಗಲೆಂದು ಪ್ರಧಾನಿ ಹುದ್ದೆಗೆ ಬಂದಿಲ್ಲ. ನನ್ನ ಜೀವದ ಕೊನೆ ಉಸಿರಿನವರೆಗೆ ನಿಮಗಾಗಿ ಬದುಕುವುದೇ ನನ್ನ ಸಂಕಲ್ಪ. ವಿಕಸಿತ ಭಾರತ ನಿರ್ಮಾಣಕ್ಕಾಗಿ ಮತ್ತೊಮ್ಮೆ ಬಿಜೆಪಿಯನ್ನು ಬೆಂಬಲಿಸಿ.
>
> – ನರೇಂದ್ರ ಮೋದಿ, ಪ್ರಧಾನ ಮಂತ್ರಿ.

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಜರುಗಿದ ವಿಕಸಿತ ಭಾರತಕ್ಕೆ ವಿಜಯ ಸಂಕಲ್ಪ ಸಮಾವೇಶಕ್ಕೆ ತಾಪಮಾನವನ್ನೂ ಲೆಕ್ಕಿಸದೇ ಕಾರ್ಯಕರ್ತರು, ಅಭಿಮಾನಿಗಳು ವಿಜಯನಗರ, ಬಳ್ಳಾರಿ, ಕೊಪ್ಪಳ, ರಾಯಚೂರು ಜಿಲ್ಲೆಗಳಿಂದ ಸಾಗರೋಪಾದಿಯಲ್ಲಿ ಕಾಲ್ನಡಿಗೆ, ಬೈಕ್, ಇತರೆ ವಾಹನಗಳಲ್ಲಿ ಆಗಮಿಸಿ ಸಮಾವೇಶಕ್ಕೆ ಮೆರಗು ಹೆಚ್ಚಿಸಿದ್ದರು. ಆಕಾಶದಲ್ಲಿ ಹೆಲಿಕಾಪ್ಟರ್ ಸದ್ದಾಗುತ್ತಿದ್ದಂತೆ ಮೋದಿ ಮೋದಿ ಝೇಂಕಾರ ಮೊಳಗಿತು.

ಪ್ರಧಾನಿ ಮೋದಿ ಅಂಜನಾದ್ರಿ, ವಿರುಪಾಕ್ಷನಿಗೆ ವಂದಿಸಿ, ಕನ್ನಡದಲ್ಲಿ ಮಾತು ಆರಂಭಿಸಿ, 2014ಕ್ಕೂ ಮುನ್ನ ಬೆಂಗಳೂರು ಸೇರಿದಂತೆ ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೆ ಬಾಂಬ್ ಮೇಲಿಂದ ಮೇಲೆ ಬಾಂಬ್ ಸ್ಫೋಟಗಳಿಂದ ದೇಶ ಬೆಚ್ಚಿ ಬಿದ್ದಿತ್ತು. ಆದರೆ, ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಬಾಂಬ್ ಸ್ಫೋಟಗಳ ಸದ್ದಡಗಿದೆ.

ಸಂವಿಧಾನದ ರಕ್ಷಕರು ಎಂದು ಹೇಳಿಕೊಳ್ಳುವ ಕಾಂಗ್ರೆಸ್ಸಿಗರಿಂದ ಕಾಶ್ಮೀರದಲ್ಲಿ ಸಂವಿಧಾನ ಜಾರಿಗೊಳಿಸಲು ಸಾಧ್ಯವಾಗಿರದ್ದನ್ನು ನಾವು ಮಾಡಿ ತೋರಿಸಿದ್ದೇವೆ. ಕೇಂದ್ರ ಸರ್ಕಾರದ ದಿಟ್ಟ ನಡೆಯಿಂದ ಕಾಶ್ಮೀರಕ್ಕಿದ್ದ 370 ಪ್ರತ್ಯೇಕ ಸ್ಥಾನಮಾನ ರದ್ದಾಗಿದೆ. ಕಾಶ್ಮೀರದಲ್ಲಿ ಸಂವಿಧಾನ ಅನುಷ್ಠಾನಗೊಳಿಸುವ ಮೂಲಕ ಡಾ.ಬಿ.ಆರ್. ಅಂಬೇಡ್ಕರ್‌ಗೆ ಗೌರವ ಸಮರ್ಪಿಸಿದ್ದೇವೆ. ಕಾಶ್ಮೀರದ ಮಕ್ಕಳ ಕೈಯಲ್ಲಿ ಬಂದೂಕು ಬದಲಿಗೆ, ಪೆನ್, ಸ್ಲೇಟು ಬಂದಿವೆ. ಇದು ಪರಿವರ್ತನೆಯ ಸಂಕೇತ ಎಂದು ಕಾಂಗ್ರೆಸ್ ಆಡಳಿತದ ವೈಫಲ್ಯವನ್ನು ಕುಟುಕಿದರು.

ಯುಪಿಎ ಸರ್ಕಾರದ ಅವಧಿಯಲ್ಲಿ ದೆಹಲಿಯ ಬಹುತೇಕ ಹೋಟೆಲ್ ರೂಮ್‌ಗಳು ಸರ್ಕಾರಿ ದಲ್ಲಾಳಿಗಳ ಹೆಸರಲ್ಲಿ ಬುಕ್ ಆಗಿರುತ್ತಿದ್ದವು. ಸರ್ಕಾರದಲ್ಲಿ ಕೊಡು, ಕೊಳ್ಳುವಿಕೆ ನಿರಾತಂಕವಾಗಿತ್ತು. ಕಾಂಗ್ರೆಸ್ ಕೂಡಾ ಅದನ್ನೇ ಬಯಸುತ್ತಿತ್ತು. ಆದರೆ, ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಭ್ರಷ್ಟಾಚಾರಕ್ಕೆ ಅಂತ್ಯ ಹಾಡಲಾಗಿದೆ. ದೇಶದ ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಬಳ್ಳಾರಿಯ ಜೀನ್ಸ್ ಉದ್ಯಮ ಭಾರತ ಹೆಗ್ಗಳಿಕೆ. ಅದರಂತೆ ಕೊಪ್ಪಳದ ಆಟಿಕೆಗಳ ಕ್ಲಸ್ಟರ್ ಜಾಗತಿಕ ಮಟ್ಟದಲ್ಲಿ ವ್ಯವಹಾರಿಕವಾಗಿ ಖ್ಯಾತಿ ಪಡೆಯುತ್ತಿದ್ದು, ಭವಿಷ್ಯದಲ್ಲಿ ದೊಡ್ಡ ಮಟ್ಟದಲ್ಲಿ ರಫ್ತಾಗಲಿದ್ದು, ಸ್ಥಳೀಯರಿಗೆ ಉದ್ಯೋಗ ಸೃಷ್ಟಿಸಲಿದೆ ಎಂದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ವಿದ್ಯುತ್ ವ್ಯತ್ಯೆಯ ಶುರುವಾಗಿದೆ. ಕೈಗಾರಿಕೆಗಳು ಬಾಗಿಲು ಮುಚ್ಚುವ ಸ್ಥಿತಿಗೆ ಬಂದಿವೆ. ರೈತರಿಗೆ ನೀಡಲಾಗುತ್ತಿದ್ದ ಕಿಸಾನ್ ಸಮ್ಮಾನ್ ಸ್ಥಗಿತಗೊಳಿಸಿದೆ. ನಮ್ಮ ಹೆಣ್ಣು ಮಕ್ಕಳ ಸುರಕ್ಷತೆ ಚಿಂತಾಜನಕವಾಗಿದೆ ಎಂಬುದಕ್ಕೆ ಹುಬ್ಬಳ್ಳಿಯ ನೇಹಾ ಕೊಲೆ ಸಾಕ್ಷಿಯಾಗಿದೆ. ಇಷ್ಟು ಸಾಲದು ಎಂಬಂತೆ ಕೇಂದ್ರದಲ್ಲಿ ಕಾಂಗ್ರೆಸ್ ಘಟಬಂಧನ್ ಅಧಿಕಾರಕ್ಕೆ ಬಂದರೆ, ನಿಮ್ಮ ಪಿತ್ರಾರ್ಜಿತ ಆಸ್ತಿಯನ್ನೂ ದೋಚಲು ಹೊಂಚು ಹಾಕಿದೆ ಎಂದು ಆರೋಪಿಸಿದರು.

ದೇಶದ ಸುಧೀರ್ಘ ಆಡಳಿತ ನಡೆಸಿದ ಕಾಂಗ್ರೆಸ್ ಸದಾ ವೋಟ್ ಬ್ಯಾಂಕ್ ಬೂಕ(ವೋಟ್‌ಗಾಗಿ ಹಸಿದ) ಸರ್ಕಾರ. ಕಾಂಗ್ರೆಸ್‌ಗೆ ಭ್ರಷ್ಟಾಚಾರ ಇಷ್ಟ. ನೀವು ತಿನ್ನಿ, ನಾವು ತಿನ್ನುತ್ತೇವೆ. ನೀವು ನಾವು ಮಾಲಾ ಮಾಲ್ ಆಗೋಣ ಎಂಬುದು ಕಾಂಗ್ರೆಸ್ ಆದ್ಯತೆ. ಹುಟ್ಟುತ್ತಲೇ ಚಿನ್ನದ ಸ್ಪೂನ್‌ನಲ್ಲಿ ತಿಂದು ಬೆಳೆದವರಿಗೆ ಬಡವರ ಕಷ್ಟಗಳು ಗೊತ್ತೇ? ಅಂತವರು ಪ್ರಧಾನಿಯಾಗಲು ಸಾಧ್ಯವೇ ಎಂಬ ಪ್ರಶ್ನೆ ಕೇಳುತ್ತಿದ್ದಂತೆ ಕೆಲವರಿಗೆ ಮಿರ್ಚಿ ಇಟ್ಟಂತಾಗುತ್ತದೆ ಎಂದು ಹೆಸರೆತ್ತದೇ ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ನಾನು ಹೆಸರು ಗಳಿಸಬೇಕೆಂದು ಅಂದುಕೊಂಡಿದ್ದರೆ ಒಮ್ಮೆ ಪ್ರಧಾನಿಯಾಗಲು ಸಾಕಿತ್ತು. ಆದರೆ, ನಾನು ಕೆಲಸಗಾರ. ನನ್ನ ಕೊನೆಯ ಉಸಿರಿನವರೆಗೆ ನಿಮ್ಮ ಸೇವೆ ಮಾಡುವ ಸಂಕಲ್ಪ ಮಾಡಿದ್ದೇನೆ. ಹಿಂದೆ ಭಾರತದ ವಿರುದ್ಧ ಭಯೋತ್ಪಾದನೆ ಮಾಡುತ್ತಿದ್ದ ದೇಶಗಳು ಈಗ ಹಿಟ್ಟು ಮಾರುವುದರಲ್ಲಿ ಬಿಜಿಯಾಗಿವೆ. ಎಲ್ಲರ ವಿಕಾಸ ಬಯಸುವ ಇಂತಹ ಸರ್ಕಾರ ಮತ್ತೆ ಬರಬೇಕೋ ಬೇಡವೋ? ಸುಭದ್ರ ದೇಶಕ್ಕಾಗಿ ಸದೃಢ ಸರ್ಕಾರ ಇರಬೇಕೋ ಬೇಡವೋ? ಎಂಬ ಪ್ರಧಾನಿ ಪ್ರಶ್ನೆಗಳಿಗೆ ಸಭಿಕರು ಮೋದಿ ಮೋದಿ ಎಂದು ಉತ್ತರಿಸಿದರು.

ಮೋದಿ ಬಾಷಣದ ವೇಲೆ ಅನೇಕರು ಮೋದಿ ಭಾವಚಿತ್ರದ ಕಟೌಟ್, ಮೋದಿ 3.0, ವೆಲ್‌ಕಮ್ ಮೋದಿ ಹಾಗೂ ಶ್ರೀ ರಾಮ ಮಂದಿರ ಮಾಡಿದವರಿಗೆ ನಮ್ಮ ಬೆಂಬಲ ಎಂಬ ಬರಹದ ಪೋಸ್ಟರ್‌ಗಳನ್ನು ಪ್ರದರ್ಶಿಸಿ, ಅಭಿಮಾನ ಮೆರೆದರು.

ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ಮನಮೋಹನ ಸಿಂಗ್ ಪ್ರಧಾನಿಯಾಗಿದ್ದ 10 ವರ್ಷಗಳಲ್ಲಿ ಬರ– ನೆರೆ ಪರಿಹಾರಕ್ಕಾಗಿ ಕರ್ನಾಟಕ 19.50 ಸಾವಿರ ಕೋಟಿ ರೂ. ಕೇಳಿದ್ದರೆ, ಕೊಟ್ಟಿದ್ದು 1,500 ಸಾವಿರ ಕೋಟಿ ರೂ. ಮಾತ್ರ. ಆದರೆ, ಮೋದಿ ಸರ್ಕಾರ ಒಂದೇ ವರ್ಷದಲ್ಲಿ 3,600 ಕೋಟಿ ರೂ., ಬರ ಪರಿಹಾರ ಬಿಡುಗಡೆ ಮಾಡಿದೆ. ಅಲ್ಲದೇ, ಎನ್‌ಡಿಆರ್‌ಎಫ್ ನಿಯದಂತೆ 4,900 ಸಾವಿರ ಕೋಟಿ ರೂ. ಸಾಕು ಎಂದು ಹೇಳಿದ್ದ ಕಾಂಗ್ರೆಸ್ ಸರ್ಕಾರ ಈಗ ಪ್ರತಿಭಟನೆ ಮಾಡುತ್ತಿರುವುದು ನಾಚಿಕೆಗೇಡು ಎಂದರು.

ರಾಜ್ಯದಲ್ಲಿ ಭೀಕರ ಬರ ಆವರಿಸಿದ್ದರೂ, ರಾಜ್ಯ ಸರ್ಕಾರ ಒಂದೇ ಒಂದು ಗೋಶಾಲೆ, ಮೇವು ಬ್ಯಾಂಕ್ ಸ್ಥಾಪಿಸಿಲ್ಲ. ದೇಶದ ಸಮಗ್ರ ಅಭಿವೃದ್ಧಿಗಾಗಿ ಉತ್ತರ ಕರ್ನಾಟಕ 14 ಸೇರಿದಂತೆ ರಾಜ್ಯದ 28 ಕ್ಷೇತ್ರಗಳಲ್ಲಿ ಬಿಜೆಪಿ–ಜೆಡಿಎಸ್ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ವೇದಿಕೆ ಮೇಲೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಬಳ್ಳಾರಿ ಕ್ಷೇತ್ರದ ಅಭ್ಯರ್ಥಿ ಬಿ.ಶ್ರೀರಾಮುಲು, ಕೊಪ್ಪಳ ಕ್ಷೇತ್ರದ ಡಾ.ಬಸವರಾಜ ಕ್ಯಾವಟರ್, ರಾಯಚೂರು ಅಭ್ಯರ್ಥಿ ರಾಜಾ ಅಮರೇಶ್ವರ ನಾಯಕ, ಮಾಜಿ ಸಂಸದ ವೈ. ದೇವೇಂದ್ರಪ್ಪ, ಎಂಎಲ್‌ಸಿ ವೈ.ಎಂ.ಸತೀಶ, ಜಿಲ್ಲಾಧ್ಯಕ್ಷರಾದ ಚನ್ನಬಸವನಗೌಡ ಪಾಟೀಲ, ಅನಿಲ್ ಕುಮಾರ್ ನಾಯ್ಡು ಮತ್ತಿತರರು ಉಪಸ್ಥಿತರಿದ್ದರು.



## ವಿಜ್ಞಾನ

### ಚಂದ್ರನ ಮೇಲೆ ಮಾನವನ ತೂಕ ಏಕೆ ಕಡಿಮೆಯಾಗುತ್ತದೆ?

**ಆರ್.ಬಿ.ಗುರುಬಸವರಾಜ**

ತರಗತಿಯಲ್ಲಿ ಶಿಕ್ಷಕರು ಸೌತಿಡರವ್ಯೂಹದ ಬಗ್ಗೆ ಪಾಠ ಮಾಡುತ್ತಿದ್ದರು. ಜಾಸ್ಮಿನ್‌ಗೆ ತುಂಬಾ ದಿನಗಳಿಂದ ಒಂದು ಪ್ರಶ್ನೆ ಕಾಡುತ್ತಿತ್ತು. ಕೇಳಲು ಹೆದರಿಕೆಯಾಗಿ ಸುಮ್ಮನಿದ್ದಳು. ಆದರೆ ಇಂದು ಶಿಕ್ಷಕರು ಅವಳ ಪ್ರಶ್ನೆಗೆ ಪೂರಕವಾದ ಪಾಠ ಮಾಡುತ್ತಿರುವುದರಿಂದ ಧೈರ್ಯವಾಗಿ ಎದ್ದು ನಿಂತು ಪ್ರಶ್ನೆ ಕೇಳಿದಳು. "ಸರ್, ಚಂದ್ರನಲ್ಲಿ ನಮ್ಮ ತೂಕ ಕಡಿಮೆಯಾಗುತ್ತದೆಯಂತೆ, ನಿಜವಾ!?" ಎಂದಳು. ಜಾಸ್ಮಿನ್ ಕೇಳಿದ ಪ್ರಶ್ನೆಯನ್ನು ಮೆಚ್ಚಿಕೊಂಡ ಶಿಕ್ಷಕರು ಈ ಬಗ್ಗೆ ತಿಳಿಸಿ ಹೇಳಿದರು.

ವಸ್ತುಗಳ ತೂಕವು ಅಲ್ಲಿನ ಗುರುತ್ವಾಕರ್ಷಣೆಯನ್ನು ಅವಲಂಬಿಸಿರುತ್ತದೆ. ಚಂದ್ರನಲ್ಲಿ ಗುರುತ್ವಾಕರ್ಷಣೆ ಬಲ ಭೂಮಿಗಿಂತ ಕಡಿಮೆ. ಚಂದ್ರನು ಭೂಮಿಗಿಂತ ದುರ್ಬಲ ಗುರುತ್ವಾಕರ್ಷಣೆಯನ್ನು ಹೊಂದಿರುವುದರಿಂದ ಮಾನವ ಸೇರಿದಂತೆ ಇತರೆ ವಸ್ತುಗಳ ತೂಕ ಕಡಿಮೆ ಎನಿಸುತ್ತದೆ.



ಭೂಮಿ ಮತ್ತು ಚಂದ್ರನ ನಡುವಿನ ದ್ರವ್ಯರಾಶಿಯ ವ್ಯತ್ಯಾಸದ ಕಲ್ಪನೆಯನ್ನು ನೀಡಲು, ಭೂಮಿಯು ಸುಮಾರು 5.97 ಥ 10^24 ಕಿಲೋಗ್ರಾಂಗಳಷ್ಟು ದ್ರವ್ಯರಾಶಿಯನ್ನು ಹೊಂದಿದ್ದರೆ, ಚಂದ್ರನ ದ್ರವ್ಯರಾಶಿಯು ಸುಮಾರು 7.34 ಥ 10^22 ಕಿಲೋಗ್ರಾಂಗಳಷ್ಟು ಇದೆ. ಇದರರ್ಥ ಚಂದ್ರನ ಮೇಲಿನ ಗುರುತ್ವಾಕರ್ಷಣೆಯ ಬಲವು ಭೂಮಿಯ ಮೇಲಿನ ಗುರುತ್ವಾಕರ್ಷಣೆಯ ಬಲದ 1/6 ಭಾಗದಷ್ಟು ಮಾತ್ರ. ಆದ್ದರಿಂದ ಚಂದ್ರನ ಮೇಲೆ ಮಾನವನ/ವಸ್ತುವಿನ ತೂಕವು ಕಡಿಮೆಯಾಗುತ್ತದೆ. ಚಂದ್ರನ ಮೇಲೆ ವ್ಯಕ್ತಿಯ ತೂಕವು ಭೂಮಿಯ ಮೇಲಿನ ತೂಕದ 16.5% ಮಾತ್ರ. ಇದರರ್ಥ ಒಬ್ಬ ವ್ಯಕ್ತಿಯು ಭೂಮಿಯ ಮೇಲೆ 100 ಕಿಲೋಗ್ರಾಂಗಳಷ್ಟು ತೂಕವನ್ನು ಹೊಂದಿದ್ದರೆ, ಅವರು ಚಂದ್ರನ ಮೇಲೆ ಕೇವಲ 16.5 ಕಿಲೋಗ್ರಾಂಗಳಷ್ಟು ತೂಕವನ್ನು ಹೊಂದಿರುತ್ತಾರೆ.

ಚಂದ್ರನ ಮೇಲೆ ವ್ಯಕ್ತಿಯ ತೂಕವು ಕಡಿಮೆಯಾಗಿ ಕಂಡುಬಂದರೂ, ಅವರ ದ್ರವ್ಯರಾಶಿ ಮಾತ್ರ ಒಂದೇ ಆಗಿರುತ್ತದೆ ಎಂಬುದನ್ನು ಗಮನಿಸುವುದು ಮುಖ್ಯವಾಗಿದೆ. ಇದರರ್ಥ ಚಂದ್ರನ ಮೇಲೆ ವ್ಯಕ್ತಿಯ ತೂಕ ನಷ್ಟ ದೇಹದ ಕೊಬ್ಬು ಅಥವಾ ಸ್ನಾಯುವಿನ ದ್ರವ್ಯರಾಶಿಯ ನಷ್ಟದಿಂದಲ್ಲ. ಬದಲಾಗಿ ಅದು ಅಲ್ಲಿನ ಗುರುತ್ವಾಕರ್ಷಣೆಯ ವ್ಯತ್ಯಾಸದ ಪರಿಣಾಮವಾಗಿದೆ.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### AFFIDAVIT

I, **LAKSHMI W/o NANYA NAIK,** aged:42 years, R/o 5th Ward, Bandebasappa Tanda, Kudligi, Vijayanagara Dist.
My Name is in Adhaar Card as **LAKSHMI** and In Bank Account my name is as **GEETHA** The above Both Names are same and belongs to me only. vide affidavit dated 29-04-2024 before NotaryT Hanumantha at Hosapete-583201

# ಮತದಾರರಲ್ಲದವರು ಕ್ಷೇತ್ರದಿಂದ ಹೊರಗುಳಿಯಿರಿ

## ಮತದಾನ ಮುಕ್ತಾಯವಾಗುವವರೆಗೆ ಜಿಲ್ಲೆಯಾದ್ಯಂತ ಪ್ರತಿಬಂಧಕಾಜ್ಞೆ : ಜಿಲ್ಲಾಧಿಕಾರಿ ಮಿಶ್ರಾ ಆದೇಶ

**ಹಂಪಿ ಟೈಮ್ಸ್ ಬಳ್ಳಾರಿ**

09–ಬಳ್ಳಾರಿ ಲೋಕಸಭೆ ಸಾರ್ವತ್ರಿಕ ಚುನಾವಣೆ ಹಿನ್ನಲೆಯಲ್ಲಿ ಮೇ 07 ರಂದು ನಡೆಯುವ ಮತದಾನ ದಿನದಂದು ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಮೇ 05 ರ ಸಂಜೆ 06 ಗಂಟೆಯಿಂದ ಮೇ 08 ರ ಸಂಜೆ 06 ಗಂಟೆಯವರೆಗೆ ಸಿಆರ್‌ಪಿಸಿ 1973 ರ ಕಲಂ 144 ರಡಿ ಜಿಲ್ಲೆಯಾದ್ಯಂತ ಪ್ರತಿಬಂಧಕಾಜ್ಞೆ ವಿಧಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಆದೇಶಿಸಿದ್ದಾರೆ.

ಮತದಾರರಿಗೆ ವಿವಿಧ ಆಸೆ–ಆಮಿಷಗಳಿಗೆ ಒಳಪಡಿಸುವುದು, ಬೆದರಿಸಲು ಯತ್ನಿಸುವುದು, ತಮ್ಮ ಪರವಾಗಿ ವರ್ತಿಸಲು ಪ್ರೇರೆಪಿಸುವುದು, ಮತಗಟ್ಟೆ ಕೇಂದ್ರಗಳ ಹತ್ತಿರದಲ್ಲಿ ಪ್ರಚಾರ ಮಾಡುವುದು, ಸಾರ್ವಜನಿಕ ಸಭೆ ನಡೆಸುವುದು, ಮತದಾರರನ್ನು ವಿವಿಧ ಸಾರಿಗೆ ವ್ಯವಸ್ಥೆಗಳ ಮೂಲಕ ಮತಗಟ್ಟೆಗಳಿಗೆ ಕರೆ ತರುವುದು, ಶಾಂತತೆಗೆ ಭಂಗ ಉಂಟು ಮಾಡುವುದು, ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವುದು ಹಾಗೂ ಇತರೆ ಅಹಿತಕರ ಘಟನೆಗಳು ನಡೆಯುವಂತೆ ಮಾಡುವ ಸಂಭವನೀಯತೆಗಳಿದ್ದು, ಇದನ್ನು ತಡೆಗಟ್ಟುವುದು ಹಾಗೂ ಮತದಾನ ಪಾವಿತ್ರ್ಯತೆಯನ್ನು ಕಾಪಾಡುವ ಹಿತದೃಷ್ಠಿಯಿಂದ ಜಿಲ್ಲೆಯಲ್ಲಿ ಪ್ರತಿಬಂಧಕಾಜ್ಞೆ ವಿಧಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಅವಶ್ಯಕವಾಗಿದೆ ಎಂದು ತಿಳಿಸಿದ್ದಾರೆ.

**ಷರತ್ತುಗಳು:** ಜಿಲ್ಲೆಯಲ್ಲಿ ಐದಕ್ಕಿಂತ ಹೆಚ್ಚು ಜನರು ಗುಂಪು ಸೇರುವುದು, ಮೆರವಣಿಗೆ ಅಥವಾ ಸಭೆ ಸಮಾರಂಭ ಜರುಗಿಸುವುದನ್ನು ನಿಷೇಧಿಸಿದೆ. ಚುನಾವಣಾ ಅಭ್ಯರ್ಥಿ ಅಥವಾ ಬೆಂಬಲಿಗರು ಸೇರಿ ಐದು ಜನರಗಿಂತ ಹೆಚ್ಚಿನ ಸಂಖ್ಯೆಯ ಜನರು ಸೇರುವಂತಿಲ್ಲ. ಶಸ್ತ್ರ, ಬಡಿಗೆ, ಬರ್ಚಿ, ಖಡ್ಗ, ಗದೆ, ಬಂದೂಕು, ಚೂರಿ, ಲಾಠಿ, ದೊಣ್ಣೆ, ಚಾಕು ಅಥವಾ ದೇಹಕ್ಕೆ ಅಪಾಯವನ್ನು ಉಂಟು ಮಾಡಬಹುದಾದ ಯಾವುದೇ ಮಾರಕಾಸ್ತ್ರಗಳೊಂದಿಗೆ ತಿರುಗಾಡು ವುದನ್ನು ಪ್ರತಿಬಂಧಿಸಲಾಗಿದೆ.



ಮತಗಟ್ಟೆ ಕೇಂದ್ರಗಳ 100 ಮೀಟರ್ ವ್ಯಾಪ್ತಿಯ ಒಳಗೆ ಚುನಾವಣೆ ಪ್ರಚಾರ ನಿಷೇಧಿಸಿದೆ. ಮನುಷ್ಯ ರೂಪದ ಅಥವಾ ಅವುಗಳ ಆಕೃತಿ ಅಥವಾ ಪ್ರತಿಮೆಗಳ ಪ್ರದರ್ಶನ ಮತ್ತು ದಹನ ಮಾಡುವುದನ್ನು ಪ್ರತಿಬಂಧಿಸಲಾಗಿದೆ.

ಎಲ್ಲಾ ಮತಗಟ್ಟೆ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯ ಸ್ಥಳ ನಿರ್ಬಂಧಿತ ಪ್ರದೇಶವಾಗಿದೆ. ಮತಗಟ್ಟೆ ಕೇಂದ್ರಗಳ 100 ಮೀಟರ್ ವ್ಯಾಪ್ತಿಯಲ್ಲಿ ಪಕ್ಷದ ಪ್ರಚಾರ, ಮತದ ಓಲೈಕೆ ಮುಂತಾದವುಗಳನ್ನು ಮಾಡುವಂತಿಲ್ಲ ಹಾಗೂ ಸದರಿ ಸ್ಥಳದಲ್ಲಿ ಬಹಿರಂಗವಾಗಿ ಘೋಷಣೆ, ಪದ ಹಾಡುವುದು, ವಾದ್ಯ ಬಾರಿಸುವುದು, ವ್ಯಾಖ್ಯಾನ ಕೊಡುವುದು, ಸನ್ನೆ ಅಥವಾ ನಕಲಿ ಪ್ರದರ್ಶನವನ್ನು ಹಾಗೂ ಸಾರ್ವಜನಿಕ ಸಭ್ಯತೆ ಅಥವಾ ನೀತಿಯನ್ನು ಆಕ್ರಮಿಸಬಹುದಾದ ಕೃತ್ಯಗಳನ್ನು ಮಾಡುವುದನ್ನು ನಿಷೇಧಿಸಲಾಗಿದೆ.

ಶವ ಸಂಸ್ಕಾರಕ್ಕೆ ಅಥವಾ ಮದುವೆ ಮತ್ತು ಧಾರ್ಮಿಕ ಮೆರವಣಿಗೆಗಳಿಗೆ ಹಾಗೂ ಕೋವಿಡ್–19 ಕಾರ್ಯಗಳಿಗೆ ಈ ಆಜ್ಞೆ ಅನ್ವಯಿಸುವುದಿಲ್ಲ. ಮದುವೆ ಮತ್ತು ಇತರೆ ಧಾರ್ಮಿಕ ಮೆರವಣಿಗೆಗಳು ಚುನಾವಣಾನೀತಿಸಂಹಿತೆಉಲ್ಲಂಘನೆಯಾಗದಂತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರದಂತೆಹಾಗೂಕೋವಿಡ್‌ಮಾರ್ಗಸೂಚಿಗಳನ್ನು ನಿಯಮಗಳನ್ನು ಪಾಲಿಸುವುದು.

ಮತಗಟ್ಟೆಗಳ ಸುತ್ತಲೂ 100 ಮೀಟರ್ ಪರಿಮಿತಿಯಲ್ಲಿ ಪ್ರಚಾರಕ್ಕೆ ಸಂಬಂಧಿಸಿದ ಪೋಸ್ಟರ್, ಬ್ಯಾನರ್ ಅಥವಾ ಇನ್ನಾವುದೇ ವಸ್ತುಗಳನ್ನು ಬಳಸುವಂತಿಲ್ಲ. ಈ ಅವಧಿಯಲ್ಲಿ ಧ್ವನಿವರ್ಧಕಗಳನ್ನು ಬಳಸುವಂತಿಲ್ಲ. ಕೋವಿಡ್–19 ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

**ಮತದಾರರಲ್ಲದವರು ಕ್ಷೇತ್ರದ ವ್ಯಾಪ್ತಿಯಿಂದ ಹೊರಗೆ ಹೋಗಬೇಕು:**

ಕಲ್ಯಾಣ ಮಂಟಪಗಳು, ಸಮುದಾಯ ಭವನಗಳು, ಹೋಟೆಲ್‌ಗಳು ಮತ್ತು ಅತಿಥಿಗೃಹಗಳನ್ನು ವಾಸ್ತವ್ಯ ಹೂಡಿದವರ ಪಟ್ಟಿಗಳ ಪರಿಶೀಲನೆ ಮಾಡಿ ಮತದಾರರಲ್ಲದವರನ್ನು ಕ್ಷೇತ್ರದ ವ್ಯಾಪ್ತಿಯಿಂದ ಹೊರಗೆ ಕಳುಹಿಸಲು ಕ್ರಮ ವಹಿಸಬೇಕು. ಸದರಿ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ಭಾರತೀಯ ದಂಡ ಸಂಹಿತೆಯ 188 ರ ಪ್ರಕಾರ ಕ್ರಮವನ್ನು ಜರುಗಿಸಲಾಗುವುದು.

ಈ ಆದೇಶವು ಮತದಾನ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ, ಪೊಲೀಸ್ ಅಧಿಕಾರಿಗಳಿಗೆ ಹಾಗೂ ಚುನಾವಣಾ ಕಾರ್ಯನಿರತ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಹಾಗೂ ಒಬ್ಬೊಬ್ಬರಾಗಿ ಮತಗಟ್ಟೆಗಳಿಗೆ ತೆರಳಿ ಮತದಾನ ಮಾಡುವ ಮತದಾರರಿಗೆ ಅನ್ವಯಿಸುವುದಿಲ್ಲ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA